ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

8.30 ಪಿ.ಎಂ.

5. ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ 1995

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ, 1995ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

+ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಪುರಸಭೆಗಳ ವಿಧೇಯಕಕ್ಕೆ ಕೆಲವು ಅಮೆಂಡ್‌ಮೆಂಟ್‌ಗಳನ್ನು ತರಲಾಗಿದೆ. ಈ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ 1995 - ಇದರ ಮುಖ್ಯ ಉದ್ದೇಶ ಪಟ್ಟಣಗಳಲ್ಲಿ ಬಹಳಷ್ಟು ಕಾರ್ಪೊರೇಷನ್ ಓಪನ್ ಲ್ಯಾಂಡ್ಸ್, ಮಿಸ್‌ಯೂಸ್ ಆಗುತ್ತಿದೆ. ಬಹಳಷ್ಟು ಕಡೆ ಎನ್‌ಕ್ರೋಚ್‌ಮೆಂಟ್ ಆಗುತ್ತಿದೆ. ಬಹಳಷ್ಟು ಕಡೆ ಫಾಲ್ಸ್ ಖಾತಾ ನಿರ್ಮಾಣ ಮಾಡಿ ಎನ್‌ಕ್ರೋಚ್ ಮಾಡುತ್ತಿದ್ದಾರೆ. ಈ ತರಹ ಪಟ್ಟಣಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಎಲ್ಲಾ ಕಡೆ ಏನು ಈ ತರಹ ಓಪನ್‌ಲ್ಯಾಂಡ್, ಕಾರ್ಪೊರೇಷನ್ ಭೂಮಿ, ಪ್ರಾಪರ್ಟಿ ಇದೆ, ಖಾಸಗಿ ಜನರು ಇದನ್ನು ಎನ್‌ಕ್ರೋಚ್ ಮಾಡಿ ಸಂಪೂರ್ಣವಾಗಿ ಮುಗಿಸುತ್ತಿದ್ದಾರೆ. ಇದನ್ನು ತಡೆಯುವುದಕ್ಕೆ ಕಾರ್ಪೊರೇಷನ್ ಆಯಕ್ಟ್‌ನಲ್ಲಿ ಯಾವುದೇ ಪ್ರಾವಿಷನ್ ಇಲ್ಲ, ಇದನ್ನು ತಡೆಯಬೇಕಾದರೆ ಸಿವಿಲ್ ಕೋರ್ಟಿಗೆ ಹೋಗಬೇಕು; ಅನೇಕ ಜನರ ಖಾತಾದಲ್ಲಿ ಎಲ್ಲಿ ಓಪನ್‌ಸ್ಪೇಸ್ ಇದೆಯೋ ಅಲ್ಲಿ ಯಾವುದೋ ಒಂದು ಶೆಡ್ ಹಾಕುತ್ತಾರೆ, ಮತ್ತೊಂದು ಹಾಕುತ್ತಾರೆ. ಹೀಗೆ ಮಾಡಿ ಖಾತದಲ್ಲಿ ರಾಂಗ್ ಎಂಟ್ರಿ ಮಾಡಿಸಿರುತ್ತಾರೆ. ಅದನ್ನು ಚಾಲೆಂಜ್ ಮಾಡುವುದಕ್ಕೆ ಅದು ಬೋಗಸ್ ಇದೆ, ಎಂದು ಕಾರ್ಪೊರೇಷನ್ ಕಮೀಷನರ್ ಅವರಿಗೆ ಯಾವುದೇ ರೀತಿಯ ಜೆನ್ಯೆನ್ ಡಾಕ್ಯುಮೆಂಟ್ ಇದೆ, ಅದನ್ನು ಕೇಳುವ ಸಲುವಾಗಿ ಪ್ರಾವಿಷನ್ ಇರಲಿಲ್ಲ. ಬೋಗಸೆ ಡಾಕ್ಯುಮೆಂಟ್‌ನ್ನು ಏನು ಕ್ರಿಯೇಟ್ ಮಾಡುತ್ತಾರೆ, ಅಥವಾ ಟ್ರಾನ್ಸಫರ್ ಮಾಡುತ್ತಾರೆ, ಈ ತರಹ ಕಾರ್ಪೊರೇಷನ್ ಏರಿಯಾದಲ್ಲಿ ಬರತಕ್ಕಂಥ ಪ್ರಾಪರ್ಟಿಯನ್ನು ಖಾಸಗಿ ಜನರು ಎನ್‌ಕ್ರೋಚ್ ಮಾಡುತ್ತಿದ್ದಾರೆ; ಗ್ರಾಬ್ ಮಾಡುತ್ತಿದ್ದಾರೆ. ಈಗ ಈ ಆಯಕ್ಟ್‌ನಲ್ಲಿ ಪ್ರೈವೇಟ್ ಪ್ರಾಪರ್ಟಿ ಅಥವಾ ಕಾರ್ಪೊರೇಷನ್ ಪ್ರಾಪರ್ಟಿ ಇದ್ದರೂ ಕೂಡ ಡಿಸ್‌ಪ್ಯೂಟ್ ಬಂದನಂತರ ಯಾವರೀತಿ ಮಾಡಬೇಕು ಎಂದು ಅದರ ಸಲುವಾಗಿ ಡಿವಿಜನಲ್ ಕಮೀಷನರ್ ಅವರಿಗೆ ಒಂದು ಅಥಾರಿಟಿ ಹಕ್ಕನ್ನು ಕೊಡಲಾಗಿದೆ. ಅವರು ಅಪ್ರೂವಲ್ ಹೇಗೆ ಮಾಡಬೇಕು, ಪ್ರೈವೇಟ್ ಪಾರ್ಟಿಯಾಗಲಿ, ಅಥವಾ ಕಾರ್ಪೊರೇಷನ್‌ದವರಾಗಲೀ ಈ ಪ್ರಾಪರ್ಟಿ ಯಾರಿಗೆ ಸಂಬಂಧಪಟ್ಟಿದ್ದು, ಅದರ ನಂತರ ಅಪಿಲೇಟ್ ಟ್ರಿಬ್ಯೂನಲ್ ಕೂಡ ಇದೆ. ಈ ಎಲ್ಲಾ ಪ್ರಾವಿಷನ್‌ಗಳು ಈಗಿರತಕ್ಕಂಥ ಕಾರ್ಪೊರೇಷನ್ ಆಯಕ್ಟ್‌ನಲ್ಲಿ ಇಲ್ಲ. ಈ ದೃಷ್ಟಿಯಿಂದ ಕಾರ್ಪೊರೇಷನ್ನಿನ ಸಾರ್ವಜನಿಕ ಪ್ರಾಪರ್ಟಿಯನ್ನು ಉಳಿಸುವ ಸಲುವಾಗಿ ಈ ತಿದ್ದುಪಡಿಯನ್ನು ತರಲಾಗಿದೆ. ಈ ದೃಷ್ಟಿಯಿಂದ ಈ ಸಭೆಗೆ ತಮ್ಮ ಮುಖಾಂತರ ಈ ತಿದ್ದುಪಡಿ ವಿಧೇಯಕಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಹೇಳಿದರು, ಈ ಎನ್‌ಕ್ರೋಚ್‌ಮೆಂಟ್‌ನ್ನು ತಪ್ಪಿಸುವುದಕ್ಕೆ ಸಲುವಾಗಿ ಈ ಬಿಲ್‌ನ್ನು

ತಂದಿದ್ದೇವೆ ಎಂದು. ಮಾನ್ಯ ವೈ. ರಾಮಕೃಷ್ಣ ಅವರು ಹೇಳುತ್ತಲೇ ಇರುತ್ತಾರೆ ಈ ಲಾಡಿಪಾರ್ಟ್‌ಮೆಂಟ್‌ಗೆ ಏನಾಗಿದೆ ಎಂದು. ಇಲ್ಲಿ "...he may within a period of three years from the date of such recording of transfer of title reopen the case" ಎಂದು ಇದೆ. ಬೆಂಗಳೂರಿನಲ್ಲಿ ಈ ಫಾಲ್ಸ್ ಡಾಕ್ಯುಮೆಂಟ್ಸ್, ಆಗಿವೆಯಲ್ಲಾ, ಕಾರ್ಪೊರೇಷನ್ ಜಮೀನನ್ನು ಎಲ್ಲಾ ಮಾಡಿಕೊಂಡಿದ್ದಾರಲ್ಲಾ, ಇದು ಮೂರು ವರ್ಷಗಳ ಒಳಗೆ ಎಂದರೆ ಒಂದು ಐದು ಪರ್ಸೆಂಟ್ ಸಿಗಬಹುದು. ಅಂದರೆ 95 ಪರ್ಸೆಂಟ್‌ನ್ನು ರೆಗ್ಯುಲರೈಸ್ ಮಾಡಿಕೊಡುವುದಕ್ಕೆ ತಂದಿರತಕ್ಕಂಥ ಬಿಲ್ ಇದು. ಈ ಲಿಮಿಟ್‌ನ್ನು ಏತಕ್ಕೆ ಹಾಕಿದ್ದೀರಿ? ಯಾರೋ ಹತ್ತು ವರ್ಷಗಳಿಂದ ಸುಳ್ಳು ರೆಕಾರ್ಡ್ಸ್ ಮಾಡಿಕೊಂಡಿದ್ದಾನೆ, ನಾಲ್ಕು ವರ್ಷಗಳಿಂದ ಮಾಡಿಕೊಂಡಿದ್ದಾನೆ. ಆದರೆ ನೀವು ಯಾಕೆ ಮೂರು ವರ್ಷಗಳ ಒಳಗೆ ಎಂದರೆ ಒಂದು ಐದು ಪರ್ಸೆಂಟ್ ಸಿಗಬಹುದು. ಅಂದರೆ 95 ಪರ್ಸೆಂಟ್‌ನ್ನು ರೆಗ್ಯುಲರೈಸ್ ಮಾಡಿಕೊಡುವುದಕ್ಕೆ ತಂದಿರತಕ್ಕಂಥ ಬಿಲ್ ಇದು. ಈ ಲಿಮಿಟ್‌ನ್ನು ಏತಕ್ಕೆ ಹಾಕಿದ್ದೀರಿ? ಯಾರೋ ಹತ್ತು ವರ್ಷಗಳಿಂದ ಮಾಡಿಕೊಂಡಿದ್ದಾನೆ. ಆದರೆ ನೀವು ಯಾಕೆ ಮೂರು ವರ್ಷ ಎಂದು ಹಾಕಿದ್ದೀರಿ? ಈಗ ಯಾರೋ ಒಬ್ಬ ಕೊಲೆ ಮಾಡಿಬಿಟ್ಟಿದ್ದಾನೆ, ಹತ್ತು ವರ್ಷಗಳಾಗಿದೆ. ಈಗ ಸಿಕ್ಕಿದರೆ ಮೂರು ವರ್ಷ ಮೇಲಾಯಿತು ಎಂದು ಅವನನ್ನು ಬಿಟ್ಟುಬಿಡೋದೇ A fraud or an offence is an offence. ಇಲ್ಲದಿದ್ದರೆ ತರಲೇಬೇಡಿ; ಈ 95 ಪರ್ಸೆಂಟ್ ಇರುವುದನ್ನು ರೆಗ್ಯುಲರೈಸ್ ಮಾಡಿಕೊಡುವುದಕ್ಕೆ ಇದನ್ನು ತರುತ್ತಿದ್ದೀರಿ. ಸರ್ಕಾರದ ಪ್ರಾಪರ್ಟಿಗೆ ಎಷ್ಟು ವರ್ಷ ಎಂದು ಇದೆ?

Sri M.P. Prakash : Limitation depends on each case. ಲಾನಲ್ಲಿ ಲಿಮಿಟೇಷನ್ಸ್ ಇರುವುದರಿಂದ, ಒಂದೊಂದು ಕಡೆಗೆ ಒಂದೊಂದು ಅವಧಿಯನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್.ಎನ್. ನಂಜೇಗೌಡ : ಗವರ್ನಮೆಂಟ್ ಪ್ರಾಪರ್ಟಿಗೆ ಮೂರು ವರ್ಷವೇ?

ಶ್ರೀ ಎಂ.ಪಿ. ಪ್ರಕಾಶ್ : ಇಲ್ಲ, 12 ವರ್ಷ under the law of adverse possession.

ಶ್ರೀ ಎಚ್.ಡಿ. ದೇವೇಗೌಡ : ಒಂದೇ ಒಂದು ಕ್ಲಾರಿಫಿಕೇಷನ್ ಅನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಒಳ್ಳೆಯ ವಿಷಯವನ್ನು ಎತ್ತಿದ್ದೀರಿ. ನಮಗೆ ಈ ಸದನದಲ್ಲಿ ಯಾವುದೇ ಮಿಸ್‌ಲೀಡ್ ಮಾಡಬೇಕೆಂಬ ಮನಸ್ಸು ಇಲ್ಲ. Between the parties ಯಾವುದೋ ಪ್ರಭಾವದಿಂದ ಅಥವಾ ಇನ್ನಾವುದೋ ಬೇರೆ ಬೇರಾ ವಾಮ ಮಾರ್ಗದಿಂದ ನನ್ನ ಆಸ್ತಿಯನ್ನು ಮತ್ತೊಬ್ಬರು ಯಾರೋ ಕಾರ್ಪೊರೇಷನ್‌ನಲ್ಲಿ ಅವರ ಹೆಸರಿಗೆ ಅಧನ್ನು ಬದಲಾವಣೆ ಮಾಡಿಕೊಂಡು ಬಿಟ್ಟರೆ, ಖಾತಾ ಬದಲಾವಣೆ ಮಾಡಿಕೊಂಡಿದ್ದರೆ ಅಂತಹ ಕೇಸುಗಳಲ್ಲಿ ಮೂರು ವರ್ಷ ಮಾತ್ರ ಎಂದು ಇಟ್ಟಿದ್ದೇವೆ. ಆದರೆ ಕಾರ್ಪೊರೇಷನ್ ಪ್ರಾಪರ್ಟಿ ಏನಿದೆ ಅಥವಾ ಮುನಿಸಿಪಾಲಿಟಿ ಪ್ರಾಪರ್ಟಿ ಏನಿದೆ, ಅದಕ್ಕೆ ಟೈಮ್ ಲಿಮಿಟ್ ಇಟ್ಟಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಹಾಗೆಂದು ಕ್ಲಿಯರ್ ಆಗಿ ಎಲ್ಲಿದೆ?

ಶ್ರೀ ಹೆಚ್.ಡಿ. ದೇವೇಗೌಡ : 178 ಇದರೊಳಗೆ ಪ್ರಾಪರ್ಟಿ ಎಂದರೆ the claims of the property by or against the corporation.

ಶ್ರೀ ಹೆಚ್.ಎನ್. ನಂಜೇಗೌಡ : ಈ ಅಮೆಂಡ್‌ಮೆಂಟ್‌ನ್ನು ತರುತ್ತಿದ್ದೀರಿ. This amendment overrides that clause.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಅವರ ಹತ್ತಿರ ವಿಚಾರ ಮಾಡಿದೆ. ಕಾರ್ಪೊರೇಷನ್ ಪ್ರಾಪರ್ಟಿಗೆ ಅಡ್ಡಿ ಇಲ್ಲ, ನಾನು ಬೇಕಾದರೆ ಒರಿಜಿನಲ್ ಆಯಕ್ಟ್.

Smt Pramela Nesargi : Three years ಎಂಬುದನ್ನು ತೆಗೆದು "as and when the frand comes to the notice ಎಂದು ಹಾಕಿ because fraud vitiates everything ಅನ್ನುವುದು ಲಾ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಒಂದೇ ಒಂದು ಏನು ಹೇಳುತ್ತಾರೆ ಎಂದರೆ ಇಂಡಿವಿಜ್ಯುಯಲ್ ಪಾರ್ಟೀಸ್‌ನಲ್ಲಿ ಪ್ರಶ್ನೆ ಬಂದಾಗ ಹನ್ನೆರಡು ವರ್ಷಗಳಿಗಿಂತ ಮೊದಲೇ ಇದ್ದರೆ, ಅದು ಪ್ರಾಬ್ಲಮ್ ಬರುತ್ತದೆ ಎಂದು ಎಂ.ಪಿ. ಪ್ರಕಾಶ್ ಅವರು ಅಷ್ಟೇ ಹೇಳಿದ್ದು, ಇಲ್ಲದಿದ್ದರೆ ಇದನ್ನು ತರಲಿಕ್ಕೆ ನಮಗೆ ಏನೂ ಸಂಕೋಚ ಇಲ್ಲ, ಹಾಗೂ ಯಾವ ಒತ್ತಡ ಕೂಡ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಗವರ್ನಮೆಂಟ್ ಪ್ರಾಪರ್ಟಿ ಆದರೆ ಮೂವತ್ತು ವರ್ಷ ಇದೆ. 12 ವರ್ಷ ಬರುವುದಿಲ್ಲ. For private properties it is 12 years. Possession is something different from the records.

ಖಾತಾ ಬದಲಾವಣೆ ಮಾಡಿದ ಮಾತ್ರಕ್ಕೆ ಪೊಸೆಷನ್ ಬರುವುದಿಲ್ಲ. Physical possession is entirely from records. ರೆಕಾರ್ಡ್ಸ್‌ನ್ನು ಚೇಂಜ್ ಮಾಡುವುದಕ್ಕೆ any time frand uitiates everything. ಮೋಸ ಮಾಡಿ, ಅನ್ಯಾಯ ಮಾಡಿ ಕಾರ್ಪೊರೇಷನ್ ರೆಕಾರ್ಡ್ಸ್‌ನಲ್ಲಿ ತಿದ್ದುಪಡಿಯಾಗಿದ್ದರೆ, at any time it can be changed and they must have the power. The question of adverse possession doesn't arise.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಇಂಡಿವಿಜ್ಯುಯಲ್ ಪರ್ಸನ್ಸ್‌ಗೆ ನೀವು ಕಾನೂನು ತಂದಿಲ್ಲ. ಈಗ ಮಂತ್ರಿಗಳು ಭಾಷಣ ಮಾಡಿದರು. ಕಾರ್ಪೊರೇಷನ್, ಮುನಿಸಿಪಾಲಿಟಿ ಪ್ರಾಪರ್ಟಿಯನ್ನು ಎನ್‌ಕ್ರೋಚ್ ಮಾಡುತ್ತಿದ್ದಾರೆ ಎಂದು. ಇದನ್ನು ತಪ್ಪಿಸಬೇಕು, ಅಲ್ಲವೇ? ಆದರೆ ಇದು ಹೀಗೆ ಮಾಡುವುದರಿಂದ ಸರಿಹೋಗುತ್ತದೆಯೇ? ಇದನ್ನು ಇನ್ನೊಂದು ಸಲ ಬೇಕಾದರೆ ಓದೋಣ.

"114A- Where the Commissioner, either suomotu or other wise after such enquiry as he consider necessary is satisfied that any transfer of title under Section 114 was got recorded k in the Corporation register by fraud, misrepesentation, or suppression of facts or by furnishing false, incorrect or incomplete material, he may within a period of three years from the date of such recording of transfer of title reopen the case"

What is the title means?

ಖಾತಾ ಒಂದು ಟೈಟಲ್ ಆಗುತ್ತದೆ, ಕ್ರಯಪತ್ರ ಒಂದು ಟೈಟಲ ಆಗುತ್ತದೆ. ನಾನಾರೀತಿಯ ಟೈಟಲ್‌ಗಳು ಇರುತ್ತವೆ. ಲೀಸ್ ಅಗ್ರೀಮೆಂಟ್ ಕೂಡ ಒಂದು ಟೈಟಲ್ ಆಗುತ್ತದೆ. ಕಾರ್ಪೊರೇ,ನ್ ಲ್ಯಾಂಡ್ ಅನ್ನು 99 ವರ್ಷಗಳಿಗೆ ಲೀಸ್‌ಕೊಟ್ಟಿ ಎಂದು ಎವಿಡೆನ್ಸ್‌ನ್ನು ಫ್ಯಾಬ್ರಿಕೇಟ್ ಮಾಡಿಕೊಳ್ಳುತ್ತೇನೆ. ಅದೂ ಟೈಟಲ್ ಆಗುತ್ತದೆ.

"....any transfer under Section 114 got recordded in the Corporation register by fraud, misrepresetation, or suppression of faccts or by furnishing false, incorrect or incomplete material, he may within a period of three years.."

ಅಂದರೆ ಇಲ್ಲಿ ಕಾರ್ಪೋರೇಷನ್ ಪ್ರಾಪರ್ಟಿ ಎಂದೂ ಹೇಳುವುದಿಲ್ಲ, ಇಂಡಿವಿಜ್ಯುಯಲ್ ಪ್ರಾಪರ್ಟಿ ಎಂದೂ ಹೇಳುವುದಿಲ್ಲ. ಆದ್ದರಿಂದ ಇದನ್ನು ಡಿಫರ್ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ನಾಣಯ್ಯನವರು ಬಂದತಕ್ಷಣ, ಅನೇಕಸಾರಿ ಗೊಂದಲ ಶುರುವಾಗಿದೆ. ಈಗಾಗಲೇ ಸುಮಾರು ಎಂಟುಮುಕ್ಕಾಲು ಗಂಟೆಯಾಗಿದೆ.

ಅಧ್ಯಕ್ಷರು : ಅವರು ಬಂದನಂತರ ನನ್ನ ರಕ್ಷಣೆಗೆ ನೀವು ಇರಿ, ಹೋಗಬೇಡಿ ಎಂದು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೋಸ್ಕರವೇ ನಾನು ಕುಳಿತುಕೊಂಡೆ. ಅವರು ಬಂದರು, ತಮಗೆ ರಕ್ಷಣೆ ಕೊಡೋಣವೆಂದು ಕುಳಿತುಕೊಂಡೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೇ, 114 (ಎ) ಎಂದು ಹೇಳತಕ್ಕಂಥ ಹೊಸ ವಿಧಿಯನ್ನು ಅಳವಡಿಸುತ್ತಿದ್ದೇವೆ. ಈ 114 ಇವತ್ತು ಕಾಯಿದೆಯಲ್ಲಿ ಇದೆ. 114, ಕಾಯಿದೆ ಇರತಕ್ಕಂತಾದ್ದು, ಯಾವರೀತಿ ನಾವು ಖಾತೆಯನ್ನು ಬದಲಾವಣೆ ಮಾಡಬೇಕೆಂದು ಹೇಳತಕ್ಕಂಥಾದ್ದರಲ್ಲಿ, between a transferor and the transferee. ಈಗಿರತಕ್ಕ 114ನ್ನು ಓದಿ. "Obligation of transferor and transferee to give notice of transfer." ಇಬ್ಬರು ಖಾಸಗಿ ವ್ಯಕ್ತಿಗಳಿಗೆ ಸಂಬಂಧಪಟ್ಟಿರತಕ್ಕ ಒಂದು ವ್ಯವಹಾರ ಯಾವುದಿದೆ. ಒಬ್ಬ ಜಮೀನನ್ನು ಕೊಂಡುಕೊಳ್ಳುತ್ತಾನೆ. ಒಬ್ಬ ಜಮೀನನ್ನು ಮಾರಾಟ ಮಾಡುತ್ತಾನೆ, ಅಂತಹ ಸಂದರ್ಭದಲ್ಲಿ ಯಾವ ವಿಧಿ ವಿಧಾನಗಳನ್ನು ಅನುಸರಿಸಬೇಕೆಂದು ಹೇಳತಕ್ಕಂತಾದ್ದಕ್ಕೆ 114ರ ವಿಧಿಯಲ್ಲಿ ಆ ನಿಯಮಗಳನ್ನು ಇವತ್ತು ಮಾಡಿದ್ದೇವೆ. ಇದನ್ನು ಏತಕ್ಕೆ ಬರಬೇಕಾಗಿತ್ತು ಎಂದರೆ. ಕೆಲವು ಸಂದರ್ಭಗಳಲ್ಲಿ ಕಾರ್ಪೋರೇಷನ್‌ನಲ್ಲಿ ಒಬ್ಬರ ಜಮೀನನ್ನು ಎಲ್ಲಾದರೂ fraudulentಆಗ ಅವನಿಗೆ ಗೊತ್ತಿಲ್ಲದೆ, ಖಾತೆಯನ್ನುವರ್ಗಾವಣೆ ಮಾಡಿ ಬಹುಶಃ ಹಿಂದೆ ಇದ್ದ ಮೂರು ವರ್ಷದೊಳಗೆ, ಆ ವ್ಯಕ್ತಿ ಕಳ್ಳತನದಲ್ಲಿ ತನ್ನ ಜಮೀನಿನ ಖಾತೆಯನ್ನು ವರ್ಗಾವಣೆ ಮಾಡುತ್ತಿರುವುದು ಗಮನಕ್ಕೆ ಬಂದಾಗ, ಅಥವಾ ಕಮೀಷನರ್ ಅವರಿಗೆ ಎಲ್ಲಾದರೂ ಇಂತಹ fraudulent act.... ನಡೆದಿದೆ ಎಂದು ಗೊತ್ತಾದಾಗ ಯಾರ ಜಮೀನು ಕಳ್ಳತನದಲ್ಲಿ ಇನ್ನೊಬ್ಬರ ಹೆಸರಿಗೆ ವರ್ಗಾವಣೆಯಾಗಿದೆ,It is a reasonable time ಈಗ ನಾವು ಕೊಟ್ಟಿರತಕ್ಕ ಅಧಿಕಾರವನ್ನು ಹೇಳುತ್ತಿದ್ದೇನೆ.

Sri H.N.Nanje Gowda : please admit that the government is not clear in their mind.

ಕಾರ್ಪೋರೇಷನ್ ಲ್ಯಾಂಡ್ ಹೇಳುತ್ತೀರಿ. ಈಗ ಇಂಡಿವಿಜ್ಯುಯಲ್ ಲ್ಯಾಂಡ್ ಎಂದು ಹೇಳುತ್ತೀರಿ. To call a spade-a-spade....

Sri. M.C. Nanaiah : Yes, it is in respect of transferor and transferee, in respect of individuals only.

Sri. H.N. Nanje Gowda : What about this amendment?

Sri. M.C. Nanaiah: The amendment is in respect of fraudulent transactions between the parties which comes to the notice of the Commissioner.

Sri. H.N. Nange Gowda : Than, you ask the Hon'ble Speaker to remove from the records the statement made by the minister. I am very sorry.

Sri M.C. Nanaiah 178A- there is another amendment.

ಶ್ರೀ ಹೆಚ್.ಎನ್. ನಂಜೇಗೌಡ : 6 ವರ್ಷ ಯಾವುದೋ ಒಂದು ಪ್ರಾಪರ್ಟಿ, fraudulent ಆಗಿ ಕಾರ್ಪೋರೇಷನ್‌ನಿಂದ ಹೊಡೆದಿರುತ್ತೇನೆ. ನೀವು ಬಿಡಿಸುವುದಕ್ಕೆ ಬರುತ್ತೀರಿ. under this Section I will go to the Court and I will get a stay.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯಸಭಾಧ್ಯಕ್ಷರೇ, 114(ಎ) ಹೇಳತಕ್ಕಂಥ ಒಂದು ಹೊಸ ವಿಧಿಯನ್ನು ಆಳವಡಿಸಿರತಕ್ಕಂಥಾದ್ದು it is between the two parties. ಎರಡು ಖಾಸಗಿ ವ್ಯಕ್ತಿಗಳಿಗೆ ಸಂಬಂದಪಟ್ಟಿರತಕ್ಕಂಥ ಯಾವುದೇ ಒಂದು ವ್ಯವಹಾರವನ್ನು ಯಾವರೀತಿ ಮಾಡಬೇಕೆಂದು ಇವತ್ತಿನ 114ರ ಕಾಯಿದೆಯಲ್ಲಿದೆ, It reads like this:

"114. Obligation of transferor and transferee to give notice of transfer...

whenever the title of any person primarily liable to the payment of the property tax on any premises to or over such premises is transferred, the person whose ktitle is transferred and the person to whom the same is transferred shall within three months after the execution of the instrument of transfer or after its registration if it be registered or after the transfer is effected, if on instrument be executed give notice of such transfer to the Commissioner.

ಮೂರು ತಿಂಗಳೊಗೆ : ಯಾರಾದರೂ ಒಬ್ಬರು ಜಮೀನನ್ನು ಮಾರಾಟ ಮಾಡಿದ್ದಾರೆ. ಎಂದು ಗೊತ್ತಾದ ಕೂಡಲೇ instrument ಅನ್ನು ರಿಜಿಸ್ಟರ್ ಮಾಡಿಯಾದ ಮೇಲೆ, ಮೂರು ತಿಂಗಳೊಳಗೆ ಕಮಿಷನರ್ ಅವರಿಗೆ ಖಾತೆಯನ್ನು ಬದಲಾವಣೆ ಮಾಡುವುದಕ್ಕೆ, ನೋಟೀಸ್ ಕೊಡಬೇಕೆಂದು ಹೇಳತಕ್ಕಂಥಾದ್ದು ಇವತ್ತು 114ರ ವಿಧಿಯಲ್ಲಿ ಇರತಕ್ಕಂತ ನಿಯಮ. ಆದರೆ ಎಲ್ಲಾದರೂ ಕಮಿಷನರ್ ಅವರ ಗಮನಕ್ಕೆ Suomotu or otherwise on an application of transferor.

ನನ್ನ ಜಮೀನನ್ನು ನಾನು ಕೊಟ್ಟಿಲ್ಲ, ಆದರೆ ನನ್ನ ಜಮೀನು ಇನ್ನೊಬ್ಬರ ಹೆಸರಿಗೆ ವರ್ಗಾವಣೆಯಾಗಿರತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿದೆ. ನಾನು ಯಾವುದೇ instrument ಅನ್ನು ದಾಖಲೆ ಮಾಡಿಕೊಡಲಿಲ್ಲ, ಎಲ್ಲೋ ಒಂದು ಕಡೆ ಅಧಿಕಾರ ಯಾರೋ ಒಬ್ಬರ ಜೊತೆಯಲ್ಲಿ ಶಾಮೀಲಾಗಿ, ದಾಖಲೆಗಳನ್ನು ಸೃಷ್ಟಿಮಾಡಿದ್ದಾರೆ, ಎಂದು ಹೇಳಿದಾಗ ಏನು ಮಾಡಬೇಕು ಎಂಬುದನ್ನು ತಿಳಿಸಿದ್ದೇವೆ. ನಾವು ಬಹಳ ಸಾರಿ ಚರ್ಚೆಮಾಡಿದ್ದೇವೆ. ಎಲ್ಲಾದರೂ ಯಾರೋ ಜಮೀನನ್ನು ಅಧಿಕಾರಿ ಜೊತೆಯಲ್ಲಿ ಶಾಮೀಲಾಗಿ ಆಗಿರತಕ್ಕಂತಾದ್ದು ಗಮನಕ್ಕೆ ಬಂದಾಗ,ಮೂರು ವರ್ಷದ ಒಳಗಡೆ, ಕಮೀಷನರ್ ಅವರು....

ಅಧ್ಯಾಕ್ಷರು : ಮಾನ್ಯ ಕಾನೂನು ಮಂತ್ರಿಗಳೇ, ಇಲ್ಲ ತೊಂದರೆ ಏನು ಬಂತೆಂದರೆ. ನೀವು ಹೇತಕ್ಕಂಥಾದ್ದು 114ನೇ ವಿಧಿ. ಸನ್ಮಾನ್ಯ ಮಂತ್ರಿಗಳು 178ಕ್ಕೆ ವಿವರಣೆ ಕೊಟ್ಟು, 114ಗೆ ಅಮೆಂಡ್‌ಮೆಂಟ್ ಕೇಳಿದರು, ಅದ್ದರಿಂದ.....

ಶ್ರೀ ಎಂ.ಸಿ. ನಾಣಯ್ಯ : ಅವರು ಮೊದಲು 178(ಎ) ಗೆ ಸಂಬಂಧಪಟ್ಟ ಹಾಗೆ ಕಾರ್ಪೋರೇಷನ್ ಜಾಗಕ್ಕೆ ಸಂಬಂಧಪಟ್ಟಹಾಗೆ ಹೇಳಿದರು.

ಅಧ್ಯಾಕ್ಷರು : ಇದಕ್ಕೆ ಅವರೇನೂ ವಿರೋಧ ಮಾಡುವುದಿಲ್ಲ. ನೀವು 114ಗೆ ಏನು ವಿವರಣೆ ಕೊಟ್ಟಿದ್ದೀರಿ. ಅದಕ್ಕೆ ವಿರೇಧ ಮಾಡುವುದಿಲ್ಲ.

Sri H.N. Nanje Gowda : Where is the need for this amendment? Let them convince.

Sri M.P. Prakash : It is in consonance with thee Transfer of property Act.

Sri H.N. Nanje Gowda : Hither to if it is bettween individual property; what prompted thee government to bring this bill?

ಕಾರ್ಪೋರೇಷನ್ ಲ್ಯಾಂಡ್, ಮುನಿಸಿಪಲ್ ಲ್ಯಾಂಡ್ ತೀಡಾಲೂಟಿ ಮಾಡುತ್ತಾರೆ, ಅದನ್ನು ತಪ್ಪಿಸಬೇಕೆಂದು ಏನೋ ಚರ್ಚೆಯಾಗಿರಬೇಕು. ಅದಕ್ಕೆಒಂದು ಕಾನೂನು ತರಬೇಕೆಂಬು ಹೊರಟಿರಬೇಕು. ಎಲ್ಲೋ ಇನ್‌ಸರ್ಟ್ ಮಾಡಬೇಕು. There was no serious thought ಎಂಬುದನ್ನು ಒಪ್ಪಿಕೊಳ್ಳಿ ಇದು ಸುಮ್ಮನೆ ಏಕೆ, ನೀವು ಏನೋ ತಂದುಟ್ಟಿದ್ದೀರಿ, ಅದನ್ನು ಪಾಸ್ ಮಾಡಿಕೊಳ್ಳಲೇ ಬೇಕು ಎಂದು ಏಕೆ ಹೇಳುತ್ತೀರಿ, ಈಗ ಕಾರ್ಪೋರೇಷನ್ ಲ್ಯಾಂಡ್ ಬಗ್ಗೆಯೂ ಕೂಡ ನಾನು ಏನೋ ಹೇಳಬೇಕೆಂದಿದ್ದೆ.

ಶ್ರೀ ಎಂ.ಸಿ. ನಾಣಯ್ಯ : ನಾವು ಇದನ್ನು ಏಕೆ ತಂದಿದ್ದೇವೆಂದರೆ, ಕೆಲವು ಸಂದರ್ಭದಲ್ಲಿ, ನಾಲ್ಕು ಜನರಿಗೆ ಒಂದು ಆಸ್ತಿಯ ಮೇಲೆ ಹಕ್ಕಿರುತ್ತದೆ.ಯಾವುದೋ ಒಂದು ಸಂದರ್ಭದಲ್ಲಿ ಒಬ್ಬ. ಯಾವುದೋ ಅಧಿಕಾರಿಗಳ ಜೊತೆ ಶಾಮೀಲಾಗಿ ಆ ಇಡೀ ಆಸ್ತಿಯನ್ನು ಒಬ್ಬರ ಹೆಸರಿಗೆ ಮಾಡಿಸಿರತಕ್ಕಂಥ ಕೆಲವು ಸಂದರ್ಭಗಳು ಉಂಟು.

Sri H.N. Nanje Gowda : Atleast let us be cleear.ಇನ್ನೂ ಎರಡು ಪ್ಯಾರಾ ಸೇರಿಸಿ. ಈರೀತಿ ಮೊಗಮ್ಮೂಗಿದ್ದರೆ ಏನಾಗುತ್ತದೆ, ಅಂದರೆ somebody will take advantage off the law.

ಶ್ರೀಮತಿ ಪ್ರಮೀಳಾ ನೇಸರ್ಗಿ : ಖಾತೆ ಬದಲಾವಣೆ ಮಾಡಬೇಕಾದರೆ. ಹಾಗೆಯೇ ಮಾಡುವುದಕ್ಕೆ ಬರುವುದಿಲ್ಲ. ಅಫಿಡೆವಿಟ್ ಹಾಕಬೇಕು. ಎಷ್ಟು ಜನ ಹಕ್ಕುದಾರರಿದ್ದಾರೆ ಎಂದು ಅಬ್ಜಕ್ಷನ್ ಕಾಲ್‌ಫರ್ ಮಾಡುತ್ತಾರೆ. ಇವೆಲ್ಲಾ ಆಯಿತು ಎಂದರೂ, ಅಪೀಲು ಪ್ರಾಪವಿಷನ್ ಇದೆ. There is no need for this amendment.

MR. Speaker : I want to be correct about one thing. Any amendment suggested to the existing should be only to improve upon the existing position or to cover up the deficiencied that would have come up in the course of the execdution of the law. The hon.member, Sri Nanje Gowda wanted to know what are the present provisions and how did the necessity arise for this amendment? please explain. indly convince the hon.member.

ಶ್ರೀ ಎಂ.ಸಿ. ನಾಣಯ್ಯ : ತಾವು ಕೇಳಿರತಕ್ಕಂಥಾದ್ದು, ಇದನ್ನು ಏತಕ್ಕೋಸ್ಕರ ತಂದಿರಿ ಎಂದು ತಾನೇ ಇವತ್ತು 114ರಲ್ಲಿ ಖಾತೆಯನ್ನು ವರ್ಗಾವಣೆ ಮಾಡುವುದಕ್ಕೆ ನಿಯಮಾವಳಿಗಳನ್ನು ರೂಪಿಸಿದ್ದಾರೆ. ಆ ನಿಯಮಾವಳಿಗಳು ಇವೆ. ಅದರಲ್ಲಿಯೇ ಖಾತೆ ವರ್ಗಾವಣೆ ಆಗುತ್ತದೆ, ಆದರೆ, ಕೆಲವು ಸಂದರ್ಭಗಳಲ್ಲಿ ಏನಾಗುತ್ತೆಂದರೆ,

ಖಾತೆಯನ್ನು ಎಲ್ಲಾದರೂ ಮೋಸದಿಂದ ವರ್ಗಾವಣೆ ಮಾಡಿರುವುದು ಗೊತ್ತಾದ ಕೂಡಲೇ. ಯಾವನೋ ಒಬ್ಬ ವ್ಯಕ್ತಿ ಕಮೀಷನರ್ ಅವರಿಗೆ ಅರ್ಜಿಯನ್ನು ಬರೆದು, ನನ್ನ ಜಮೀನು ಮೋಸದಿಂದ ವರ್ಗಾವಣೆಯಾಗಿದೆ, ಇದರ ಬಗ್ಗೆ ತನಿಖೆ ನಡೆಸಿ, ಇದನ್ನು ಮೂರು ವರ್ಷದೊಳಗೆ ಮಾಡಬೇಕೆಂದು ಕೊಟ್ಟಾಗ, ಕಮೀಶನರ್‌ಗೆ ಇಲ್ಲದಿರತಕ್ಕ ಅಧಿಕಾರ.....

ಒಬ್ಬ ಮಾನ್ಯ. ಸದಸ್ಯರು : ಕಾಸ್ ಆಫ್ ಆಕ್ಷನ್ ಯಾವಾಗ ಅರೈಸ್ ಆಗುತ್ತದೆ? From the date of transfer or from the date when it comes to the knowledge?

ಶ್ರೀ ಎಂ.ಸಿ. ನಾಣಯ್ಯ : ಇವತ್ತು ನಮ್ಮ ರಾಜ್ಯದ ಉಚ್ಚನ್ಯಾಯಾಲಯದ ತೀರ್ಪು ಇದೆ. ಅದು ಶ್ರೀಮತಿ ಪ್ರಮೀಳಾ ಅವರಿಗೂ ಗೊತ್ತಿದೆ. ಖಾತೆ ಒಂದು ಸಾರಿ ವರ್ಗಾವಣೆಯಾದ ಮೇಲೆ, ಅದನ್ನು ಬದಲಾವಣೆ ಮಾಡುವ ಅಧಿಕಾರ ಇಲ್ಲವೆಂದು ಹೇಳತಕ್ಕದ್ದು ರಾಜ್ಯದ ಉಚ್ಚನ್ಯಾಯಾಲಯದ ತೀರ್ಪು ಇದೆ. ಇದು ತಮಗೆ ಗೊತ್ತಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ ; ಇಲ್ಲ, ದಯವಿಟ್ಟು ಕ್ಷಮಿಸಬೇಕು. ಅಲ್ಲಿ ಆಗಿರುವುದು ಖಾತೆ ಬಗ್ಗೆ ಅಲ್ಲ. ಸಿವಿಲ್ ಕೋರ್ಟಿಗೆ ಹೋಗಬೇಕೆಂದು ಹೇಳಿದೆ. ಸಿವಿಲ್ ಕೋರ್ಟಿನಲ್ಲಿ ಡಿಸ್‌ಪ್ಯೂಟ್ ಬಂದಾಗ, ಇಬ್ಬರು ಪಾರ್ಟಿ ಬಂದಾಗ, they have to establish their civil rights. ಕಾರ್ಪೋರೇಷನ್ ಕಮೀಷನರ್ ಹಕ್ಕುದಾರರನ್ನು ಡಿಸೈಡ್ ಮಾಡುವುದಕ್ಕೆ ಬರುವುದಿಲ್ಲ. This is a fundamental principle of law.

Sri H.N. Nanje Gowda : If the perties are to apply where is the question of suomotu on the part of the Commissioner? ಯಾವ ಪಾರ್ಟಿದ್ದು ರಾಂಗ್‌ಫುಲ್ ಆಗಿ ಟೈಟಲ್ ಟ್ರಾನ್ಸ್‌ಫರ್ ಆಗಿದೆ ಎಂದು ಹುಡುಕಿ ಕೊಂಡು ಕುಳಿತು ಕೊಳ್ಳುವುದಾ?

Mr. Speaker : Let us hear Mr. Prakash. The hon. member desires to know how did the cause of action arise for this particular amendment ? i also want to be informed about it.

Sri M.P. Prakash (Min for Rural Dev. & Panchayat Raj) : It is just in concurrence with the transfer of prop[erty Act. If you come to know that by some fraudulent act certain transactions have taken place and if it is within the knowledge of the concerned officer, suo motu he can initiate action otherwise, on the application.

Sri M.P. Prakash : There is.

Mr. Speaker : What is the improvement ?

ಶ್ರೀ ಎಂ. ಪ್ರಿ. ಪ್ರಕಾಶ್ : ಈಗ 114 ರಲ್ಲಿ ಕ್ಲಿಯರ್ ಆಗಿದೆ ನೋಡಿ..

ಶ್ರೀ ಹೆಚ್. ಎನ್. ನಂಜೇಗೌಡ ; ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು 3 ವರ್ಷಟೈಮ್ ಕೊಟ್ಟಿ ಆಯಿತು. ಈಗ ಒಬ್ಬರ ಆಸ್ತಿ ಟೈಟಲ್ ಒಬ್ಬರಿಗೆ ಟ್ರಾನ್ಸ್‌ಫರ್ ಆಗಿ ಬಿಟ್ಟಿರುತ್ತದೆ. ಮೈನರ್ ಹುಡುಗ ; ಅವನ ಆಸ್ತಿಯನ್ನು ಯಾರೋ ಹೆಸರಿಗೆ ಟ್ರಾನ್ಸ್‌ಫರ್ ಮಾಡಿಕೊಂಡು ಬಿಟ್ಟಿರುತ್ತಾರೆ. ಅವನು 10 ವರ್ಷ ಆಗುತ್ತದೆ ತನ್ನ ಟೈಟಲ್ ಕೇಳಬೇಕಾದರೆ. 10 ವರ್ಷದ ಮೇಲೆ ಅವನು ಕೋರ್ಟಿಗೆ ಹೋಗಬೇಕಾಗುತ್ತದೆ ಈಗ ಇರುವ ಕಾನೂನು ಪ್ರಕಾರ. ನೀವು 3 ವರ್ಷಕ್ಕೆ

ಮಾಡಿಬಿಟ್ಟಿದ್ದೀರಿ. ಇಂಡಿವಿಜಿಯಲ್ ಅಮೇಲೆ ನೋಡೋಣ. Should he loses title over the property? Let us clear about the law.

(Interruptions)

ಶ್ರೀಹೆಚ್.ಎನ್. ನಜೇಗೌಡ ; ಈಗ ಡೌಟ್ ಬಂದಿದೆಯಲ್ಲಾ, ಈಗ ನಾವು ಕೆಲವೊಂದು ಚರ್ಚೆ ಬೇಡ ಪಾಸ್ ಮಾಡಿ ಎಂದು ಹೇಳಲಿಲ್ಲವೇ? ವರ್ಡಿಂಗ್ಸ್ ಸರಿ ಇಲ್ಲ, ಸರಿ ನೀವು ಯಾರ ಉದ್ದೇಶಕ್ಕೆ ತರುತ್ತೀರಿ ತನ್ನಿ ಕಾನೂನು. ಬೇಡ ಎಂದು ನಾವು ಹೇಳುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ ; ಮಾನ್ಯ ಸಭಾಧ್ಯಕ್ಷರೇ ನಾನು ಒಂದು ವಿಚಾರವನ್ನು ಹೇಳುತ್ತೇನೆ. ಅದಕ್ಕೆ ಅವರು ಒಪ್ಪುತ್ತಾರಾ ನೋಡೋಣ.

ಶ್ರೀ ವಿ. ಸೋಮಣ್ಣ (ಭಿನ್ನಿಪೇಟೆ) : ಮಾನ್ಯ ಸದಸ್ಯರಾದ ಪ್ರಮೀಳಾವರು ಹೇಳಿದರು. ಖಾತಾ ಬದಲಾವಣೆ ಅದರೆ ಕೋರ್ಟಿಗೆ ಹೋಗಬಹುದು ಎಂದು ಅದರೆ ನನ್ನ ಅನುಭವದಲ್ಲಿ ನಾನು 12 ವರ್ಷಗಳ ಕಾಲ ಮಹಾನಗರಪಾಲಿಕೆ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅಧ್ಯಕ್ಷನಾಗಿ ಈ ಕಮಿಟಿಯಲ್ಲಿ ಕೆಲಸ ಮಾಡಿದ್ದೇನೆ. ಒಂದೇ ಒಂದು ಉದಾಹರಣೆಯನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮಲ್ಲೇಶ್ವರಂ 11ನೇ ಕ್ರಾಸಿನಲ್ಲಿರತಕ್ಕಂಥ ಒಂದು ಆಸ್ತಿಗೆ ನಾಲ್ಕು ಮಕ್ಕಳು ಇರುತ್ತಾರೆ. 4ಜನ ಮಕ್ಕಳಲ್ಲಿ ತಂದೇ ತೀರಿಹೋದ ತಕ್ಷಣ ನಾನು ಒಬ್ಬೇ ಮಗ ಎಂದು ಹೇಳಿ ಒಂದು ಪ್ರಮಾಣ ಪತ್ರ ಕೊಟ್ಟು ತಕ್ಷಣ ಖಾತಾವನ್ನು ಸಂಬಂಧಪಟ್ಟ ಅಧಿಕಾರಿಗಳು ಬದಲಾವಣೆ ಮಾಡುತ್ತಾರೆ ಅವನ ಹೆಸರಿಗೆ. ಅದು ಅದ ಮೇಲೆ ಅವರ ಮನೆಯವರಿಗೆ ಗೊತ್ತಾಗಿ ಅಫೀಲ್ ಹಾಕಿತೊಳ್ಳುತ್ತಾರೆ. ಅಫೀಲ್ ಸಾಕಿಕೊಂಡ ಮೇಲೆ ನಮ್ಮಲ್ಲಿ ಒಂದು ಎಂಡಾರ್ಸ್‌ಮೆಂಟ್ ಕೊಡುತ್ತಾರೆ ನಮ್ಮಲ್ಲಿ ಖಾತೇ ಒಂದು ಸಾರಿ ಬದಲಾವಣೆ ಅದ ಮೇಲೆ ನಾವು ಚೇಂಜ್ ಮಾಡುವುದಕ್ಕೆ ಬರುವುದಿಲ್ಲ ನೀವು ಕೋರ್ಟಿಗೆ ಹೋಗಿ ಎಂದು ಕೋರ್ಟಿಗೆ ಹೋದರೆ ಎಷ್ಟುವರ್ಷಗಳ ಕಾಲ ಅವನು ಅಲ್ಲಿ ಹೆಣಗಾಡಬೇಕಾಗುತ್ತದೆ. ಅದಕೋಸ್ಕರವಾಗಿ 114 (ಎ)ನಲ್ಲಿ ಏನು ಮಾಡಿದ್ದಾರೆ 3 ವರ್ಷದ ಒಳಗಡೆ ಏನಾದರೂ ಇಂತಹ ಘಟನೆಗಳು ಅವರ ಗಮನಕ್ಕೆ ಬಂದರೆ ಅಯುಕ್ತರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದಕ್ಕೋಸ್ಕರವಾಗಿ ಈ ಒಂದು ತಿದ್ದುಪಡಿಯನ್ನು ತಂದಿರತಕ್ಕಂಥಾದ್ದು.

(Interruptions)

Sri. H.N. Nanje Gowda: There years from what date?

ನನಗನಿಸುತ್ತದೆ ಇಲ್ಲಿ ಅಕ್ಸಿಡೆಂಟಲ್ ಆಗಿ ಏನೋ ಆಗಿರಬೇಕು. ಇದರಲ್ಲಿ ಕ್ಲಿಯರ್ ಆಗಿ ಇಲ್ಲ, ಅಣ್ಣ ಖಾತೆಯನ್ನು ಬದಲಾವಣೆ ಮಾಡಿಕೊಂಡು 4ವರ್ಷ ಆದ ಮೇಲೆ ಕೇಳುವಂತೆ ಇಲ್ಲ, ಅಲ್ಲಿಗೆ ಹೋಯಿತಲ್ಲಾ 3 ವರ್ಷ ಆಯಿತು 4ನೇ ವರ್ಷದಲ್ಲಿ ತಮ್ಮನ ಹೆಸರಿಗೆ ಖಾತೆಯೇ ಇಲ್ಲನಾವೇ ಜಡ್ಜಮೆಂಟ್ ಕೊಟ್ಟಂತೆ ಆಯಿತು. ಅದನ್ನು ಓದಿ.

ಅಧ್ಯಕ್ಷರು : ಸನ್ಮಾನ್ಯ ನಂಜೇಗೌಡರೇ ಸುಪ್ರೀಂ ಕೋರ್ಟ ಜಡ್ಜಮೆಂಟ್ ಪ್ರಕಾರ ಪ್ರೈವೇಟ್ ಪ್ರಾಪರ್ಟಿಯಲ್ಲಿ ಅಡ್ವರ್ಸ್‌ಪೊಸಿಷನ್ ಎಫೆಕ್ಟಿಗೆ ಬರತಕ್ಕಂಥಾದ್ದು 12 ವರ್ಷಕ್ಕೆ. ಆದ್ದರಿಂದ ತಾವು 3 ವರ್ಷಕ್ಕೆ ಎಂದು ಮಾಡಿವುದು ತಪ್ಪು ಎಂದಾದರೆ 3 ವರ್ಷವನ್ನು ತೆಗೆದರೆ I think you should stop at 11th year. you can't go beyohd that ಅಲ್ಲವೇ ? 11ವರ್ಷ ಎಂದು ಮಾಡಿಕೊಳ್ಳಬಹುದು ಅಲ್ಲವೇ? ಲಿಮಿಟೇಷನ್

ಬೇಡ ಎಂದು ಹೇಳಿದರೆ ಅಡ್ವರ್ಸ್‌ಪೊಜಿಷನ್ ಬರುತ್ತದೆ ಅಲ್ಲವೇ? ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆಯಲ್ಲಾ.

Sri H.N. Nanje Gowda: Sir, what you have mentihed is. the reasons you have given in this new section is "Criminal offences...

ಶ್ರೀ ಹೆಚ್. ಶಿವಪ್ಪ: ಮಾನ್ಯ ಅಧ್ಯಕ್ಷರೇ 11ವರ್ಷ ಅಗಲಿ 12 ವರ್ಷಾಗಲಿ ಯಾವಾಗ ನಾಲೇಡ್ಜ್‌ಗೆ ಬಂತು 3ವರ್ಷ ಯಾವಾಗನಿಂದ ಎಂಬುದನ್ನು ಫಿಕ್ಸ್ ಮಾಡಬೇಕಲ್ಲಾ, ಒಬ್ಬರು ಮೈನರ್ ಇರುತ್ತಾರೆ. ಅವನು ಮೇಜರ್ ಆದ ಮೇಲೆ ಅವನ ನಾಲೇಡ್ಜ್‌ಗೆ ಬರುತ್ತದೆ. 11ವರ್ಷ 12 ವರ್ಷ ಆಗಿರುತ್ತದೆ. ಯಾವಾಗ ಮಾಡಬೇಕು ಅದಕ್ಕೆ ಒಂದು ಡೇಟಡ್ ಫಿಕ್ಸ್‌ಮಾಡಿ

ಶ್ರೀ.ಎಂ.ಸಿ. ನಾಣಯ್ಯ ; ಮಾನ್ಯ ಅಧ್ಯಕ್ಷರೇ, ಇದರಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಇಲ್ಲ. ಈಗ ನಾವು ತಂದಿರತಕ್ಕಂಥ 114 (ಎ) ಯಾವುದು ಇದೆ ಎಲ್ಲಾದರೂಮೋಸದಲ್ಲಿ ಯಾರಿಗೆ ಜಮಿನು ಹೋಗುತ್ತಾ ಇರತಕ್ಕಂಥಾದ್ದು ಅವನಿಗೆ ಹೋಗದೆ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿ ಎಲ್ಲಾದರೂ ತರಹ ಆದರೆ ಅಂತಹ ಸಂದರ್ಭಗಳಲ್ಲಿ ಕಮೀಷನರ್‌ಗೆ ಅದನ್ನು ರೆಕ್ಟಿಫೈ ಮಾಡತಕ್ಕಂಥ ಅಧಿಕಾರದಲ್ಲಿ . ಈಗ ತಾವು ದಯವಿಟ್ಟು ನೋಡಿ.ಇವತ್ತು ಏನಾಗಿದೆ ಮಾನ್ಯ ಸಭಾಧ್ಯಕ್ಷರೇ ಇವತ್ತು ಕಾರ್ಪೋರೇಷನ್ ಕಮೀಶನರ್ ಅವರಿಗೆ ಯಾರಾದರೂ ಒಂದು ಅರ್ಜಿ ಕೊಟ್ಟು ನನ್ನ ಖಾತೆಯನ್ನು ಇವರು ಕಳ್ಳತನದಲ್ಲಿ ಮೋಸದಲ್ಲಿ ವರ್ಗಾವಣೆ ಮಾಡಿಕೊಂಡಿದ್ದಾರೆ. ನನಗೆ ಸಿಕ್ಕುತ್ತಾ ಇರತಕ್ಕಂಥ ಹಕ್ಕನ್ನು ಕೊಡದೇ ಇವರು ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾ ಇರತಕ್ಕಂಥ ಒಂದು ಅರ್ಜಿಯನ್ನು ಕೊಟ್ಟರೆ ಕಮೀಷನರ್‌ರವರಿಗೆ ಇದು ಮಾಡಿರತಕ್ಕಂತಾದ್ದು ನಿಜ ಎಂಬುದು ಗೊತ್ತಾದರೂ ಕೂಡ ಅವರಿಗೆ ಇದರ ಬಗ್ಗೆ ತೀರ್ಮಾನ ಮಾಡಲಿಕ್ಕೆ ಇರತಕ್ಕಂಥಾದ್ದಕ್ಕೆ ಒಂದು ಅಧಿಕಾರ ಇವತ್ತಿಗೂ ಇಲ್ಲ. ಇದರ ಪರಿಣಾಮ ಏನಾಗುತ್ತದೆ ಅಂದರೆ ಶ್ರೀಮಾನ್ ಸೋಮಣ್ಣನವರು ಹೇಳಿದಹಾಗೆ ಪ್ರತಿಯೊಂದು ಹಂತದಲ್ಲೂ ಕೂಡ ಸಿವಿಲ್ ಕೋರ್ಟ್‌ಗೆ ಹೋಗುಬೇಕಾಗುತ್ತದೆ. ಸಿವಿಲ್ ಕೋರ್ಟ್‌ಗೆ ಹೋದರೆ 8-10ವರ್ಷ ಆದರೂ ಕೂಡ ಇದು ಇತ್ಯರ್ಥವಾಗುವುದಿಲ್ಲ. ಇದನ್ನು ತಪ್ಪಿಸುವುದಕ್ಕೋಸ್ಕರ ಅವರ ಗಮನಕ್ಕೆ ಇದು ಬಂದಾದ ಕೂಡಲೇ ಅಥವಾ ಅವರಿಗೆ ಒಂದು ಅರ್ಜಿಯನ್ನು ಕೊಟ್ಟು ಆದ ಮೇಲೆ ಎಲ್ಲಾದರೂ ಒಂದು ಫ್ರಾಡುಲೆಂಟ್ ಟ್ರಾನಸ್ಯಾಕ್ಷನ್ ಆಗಿದೆ ಎಂದು ಗೊತ್ತಾದ ಕೂಡಲೇ ರೀಜನಬಲ್‌ಟೈಮ್ 3ವರ್ಷದೊಳಗೆ ಮಾಡಬೇಕು ಎಂದು ಹೇಳುತ್ತಾ ಇರತಕ್ಕಂತ ಒಂದನ್ನು ಇದರಲ್ಲಿ ಇಟ್ಟುಕೊಂಡಿದ್ದೇವೆ. ಆದರೆ ನೀವು ಹೇಳುತ್ತಾ ಇರತಕ್ಕಂಥ ಅಂಶ ಏನು ಅಡವರ್ಸ್ ಪೊಸಿಷನ್ ಅನ್ನು ಕ್ಲೈಮ್ ಮಾಡಲಿಕ್ಕೆ ಇರತಕ್ಕಂಥಾದ್ದು 12ವರ್ಷ. ಯಾವುದಾದರೂ ಒಂದು ಜಮೀನು ಒಬ್ಬರ ಸ್ವಾಧೀನದಲ್ಲಿ ಇದ್ದರೆ ಅನ್ ಇಂಟೆರಪ್ಟೆಡ್ ಆ ಜಮಿನು ಅವನ ಸ್ವಾಧೀನದಲ್ಲಿ ಇದ್ದರೆ ಅವನು ಆ ಜಮೀನಿನ ಮಾಲೀಕ. ಆದ್ದರಿಂದ ನೀವು ಕೇಳುತ್ತಾ ಇರತಕ್ಕಂಥಾದ್ದು 3ವರ್ಷ ಎಂದು ಇರತಕ್ಕಂಥಾದ್ದು ಬೇಕಾಗಿಲ್ಲ ಎಂದು ತಾವು ಹೇಳತಕ್ಕಂಥವಾದವನ್ನು ನಾನು ಒಪ್ಪುತ್ತೇನೆ. ಆದರೂ.

. . . .if he has been in possession of the property or a party has been in his possession for an uninterrupted period of 12 years, than the civil court cannot interfere Am I correct?

ಆದ್ದರಿಂದ ನೀವು ಹೇಳುತ್ತಾ ಇರತಕ್ಕಂಥಾದ್ದು as and when it comes to the knowledge ಎಂದು ಹೇಳುತ್ತಾ ಇರತಕ್ಕಂಥಾದ್ದನ್ನು ತರಬೇಕು ಎಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮೂಲಭೂತವಾಗಿ ಇದನ್ನು ತೀರ್ಮಾನ ಮಾಡತಕ್ಕಂಥಾದ್ದು ಸಿವಿಲ್ ಕೋರ್ಟ್ ಹೊರಟು ಬೇರೆ ಯಾವುದೇ ಅಧಿಕಾರಿಗೆ ಇಲ್ಲ, ಕಮಿಷನರ್‌ಗೆ ಇಲ್ಲ, ಅಫೀಸರ್‌ಗೆ ಇಲ್ಲ ಟೈಟಲ್ ಅನ್ನುತೀರ್ಮಾನ ಮಾಡುವ ಹಕ್ಕು ಯಾರಿಗೂ ಇಲ್ಲ. Katha is somethging different from the title.

Sri H.N. Nanje Gowda: Sir, I want to submit very humbly.

ಬಹುಶಃ ಖಾಸಗಿ ವ್ಯಕ್ತಿಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದಕ್ಕೆ ಈ ಕಾನೂನು ತಂದಿದ್ದೀರಿ ಎಂದು ನಾನು ಅಂದುಕೊಂಡಿಲ್ಲ. Let me be frank. Probably they thought there crores of rupees the property of the Corporation

ಫ್ಯಾಬ್ರಿಕೇಟ್ ಆಗಿ ಫಾಲ್ಸ್ ಡಾಕ್ಯುಮೆಂಟ್ಸ್ ಆಗಿ ಖಾತ ಮಾಡಿಸಿಕೊಂಡ ಸ್ವಂತ ಎಂದು ಇಟ್ಟುಕೊಂಡಿದ್ದಾರೆ ಅದನ್ನು ತಪ್ಪಿಸಲು ಎಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ನನಗೆ ಅರ್ಥವಾಗುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಕಾರ್ಪೋರೇಷನ್ ಪ್ರಾಪರಿಟಿ ಎಂದು ತಾವು ಏನು ಹೇಳುತ್ತೀರೋ ಆಕಾರಣದಿಂದಲೇ ನಾವು ಯಾವುದೇ ಟೈಮ್ ಲಿಮಿಟ್ ಫಿಕ್ಸ್ ಮಾಡಿಲ್ಲ, ಇವತ್ತು ಕಾರ್ಪೋರೇಷನ್ ಪ್ರಾರ್ಪಟಿಯನ್ನು ನಾಕಾ ಮಾಡಿರತಕ್ಕಂಥಾದ್ದು 10 ವರ್ಷ ಇರಲಿ 15 ವರ್ಷ ಇರಲಿ ಈಗ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ 178 (ಎ) ರಲ್ಲಿ ಕ್ಲಾರಿಟಿ ಇದೆ. ಅದರಲ್ಲಿ ಯಾವುದೇ ಸಂಶಯ ಇಲ್ಲ. only revision powers between the two party ಬಂದಾಗ ಅದನ್ನು ಇನ್‌ಡೆಫ್‌ನೇಟ್ ಪಿರಿಯಡ್ 10ವರ್ಷ ಮಾಡಿದರೆ ಬಹಳ ತೊಂದರೆ ಆಗುತ್ತದೆ. between the two parties ಪ್ರೈವೇಟ್ ಪ್ರಾರ್ಪಟಿಗೆ ಸಂಬಂಧಪಟ್ಟದ್ದು 114 (ಎ)ನಲ್ಲಿ ತಿದ್ದುಪಡಿ ಸೂಚಿಸಿರುವುದಿ. 178 (ಎ) ನಲ್ಲಿ ಕಾರ್ಪೋರೇಷನ್ ಪ್ರಾರ್ಪಟಿ ಎನು ಇದೆ ಇದರ ಬಗ್ಗೆ ನಾವಾಗಿಯೇ ಯೋಚನೆ ಮಾಡಿದ್ದು. ಇದರ ಬಗ್ಗೆ ಯಾರ ದಾಕ್ಷಿಣ್ಯಕ್ಕೂ ಬಲಿಯಾಗಿಲ್ಲ. ಕಾರ್ಪೋರೇಷನ್ ಪ್ರಾರ್ಪಟಿ ಎಂದು ತಾವು ಎನು ಹೇಳಿದಿರಿ ಅದಕ್ಕೆ ನಾನು ಹೊಸ ಎನ್‌ಕ್ವೈರಿ ಆಫೀಸರ್‌ನ್ನು ನೇಮಕ ಮಾಡಿದ ಮೇಲೆ ಈ ಡಿಫೆಕಟ್ಸ್ ಏನು ಇದೆ ಇದು ಗೊತ್ತಾಯಿತು ಇದನ್ನು ರೆಕ್ಟಿಫೈ ಮಾಡದೇ ಹೋದರೆ ಬಹಳ ತೊಂದರೆಯಾಗುತ್ತದೆ. ಕಾರ್ಪೋರೇಷನ್ ಪ್ರಾರ್ಪಟಿ ಎಂದು ಸುಮಾರು 30-40ಕೆರೆಗಳು ಇವೆ ಅವುಗಳನ್ನು ಕಾರ್ಪೋರೇಷನ್‌ನವರೊಡನೆ ಶಾಮೀಲಾಗಿ ಖಾತೆ ಮಾಡಿದ್ದಾರೆ. ನಾವು ಏನು ಅದಕ್ಕೆ ಟೈಮ್ ಹಾಕಿಲ್ಲ, ಒಂದಲ್ಲ, ಎರಡಲ್ಲ, ನೂರಾರು ಕೆಲಸಗಳಿರಬಹುದು ಕಾರ್ಪೋರೇಷನ್ ಪ್ರಾಪರ್ಟಿಯನ್ನು ನಾಕ್ ಆಫ್‌ಮಾಡುವಾಗ We will go all out. ಎರಡು ಪಾರ್ಟೀಸಸ್ ಪ್ರಶ್ನೆ ಬಂದಾಗ, ಪಿರಿಯಡ್ ಅನ್ನು 3ವರ್ಷದಿಂದ 10ವರ್ಷ ಮಾಡಿದರೆ ಒಂದು ದೊಡ್ಡ ಸಮಸ್ಯಯನ್ನು ನಾವಾಗಿಯೇ ಉಲ್ಬಣ ಮಾಡುತ್ತೇವೆ ಎನ್ನುವ ಸಂಶಯ ನಮ್ಮಲ್ಲಿ ಇರತಕ್ಕಂಥಾದ್ದು ಅದಕ್ಕೆ ರೀಸನಬಲ್ ಟೈಮ್ 3ವರ್ಷ ಎಂದು ಇಟ್ಟುಕೊಂಡು ರಿವಿಷನ್ ಪ್ರಾವಿಷನ್ ಮಾಡಿಕೊಂಡಿದ್ದಾವೆ before the Dinisional commssioner ಇದರೊಳಗೆ ನಮಗೆ ಯಾವುದೇ ಮೋಟಿವೇಷನ್ ಇಲ್ಲ. ನೀವೇ ನಾಲ್ಕಾರು ಸಮಸ್ಯೆಗಳನ್ನು ಎತ್ತಿದ್ದೀರಿ, ಮಲ್ಲೇಶ್ವರದಲ್ಲಿ ಒಬ್ಬಳು ಹೆಣ್ಣು ಮಗಳ ಆಸ್ತಿ ಯಾರೋ ಹೊಡೆದು ಕೊಂಡು ಹೋದರೆಂದು ಹೇಳಿದರು. you are very nuci: concerned about the property that has been knocked off with the collusion of the officrs, of the corporation property ನೀವು ಇದರ ಬಗ್ಗೆ ನಿಮ್ಮ ಮನಸ್ಸು ಕೆಡಿಸಿಕೊಂಡಿದ್ದೀರಿ At least we have made an attempt by appointing a special officer to revEiew the entire thing. If it needs kfurther improvement. ಇದಕ್ಕೆ ಇನ್ನೊಂದು ಅಮೆಂಡ್‌ಮೆಂಟ್

ತರಲಿಕ್ಕೆ ತೊಂದರೆ ಇಲ್ಲ. ಇದರ ಬಗ್ಗೆ ನಿಮ್ಮಲ್ಲಿ ಒಂದೇ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ 178 ಎ ಏನಿದೆ We wanted to go all out and see that corporation property Which has been knocked off will be brought back If it needs any further improvement

ಇದಕ್ಕೆ ಇನ್ನೊಂದು ಅಮೆಂಡ್‌ಮೆಂಟ್ ತರಲಿಕ್ಕೆ ನಮಗೇನೂ ಪ್ರಾಬ್ಲಮರ್ ಇಲ್ಲ. But why I am very much particular on this amending bill is to take action against those people who have knocked off the Corporation property.

ನಾನೇ ಸಲಹೆ ಕೊಟ್ಟು ಅವಶ್ಯ ಬಿದ್ದರೆ ಇದಕ್ಕೆ ಒಂದು ತಿದ್ದುಪಡಿ ತನ್ನಿ ಎಂದು; ಇದರೊಳಗೆ ಏನಾದರೂ ಲಾಂಗ್ವೇಜ್‌ನಲ್ಲಿ ವ್ಯತ್ಯಾಸಗಳಿದ್ದರೆ, ನಾನು ಲೀಗಲ್ ಎಕ್ಸಪರ್ಟ್ ಅಲ್ಲ, ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ದಯಮಾಡಿ ಇದಕ್ಕೆ ಸಹಕಾರ ಮಾಡಬೇಕು.

ಅಧ್ಯಕ್ಷರು : ಪಬ್ಲಿಕ್ ಕ್ರಿಮಿಸಸ್ ಅನ್ನು ಗಾರ್ಡ್ ಮಾಡುವುದಕ್ಕೆ ಇದು ವೈಟಲ್ ಅಲ್ಲವೇ?

Smt Pramila nesargi : 178 (A) deals not with Khata but with claims section 114 deals with Katha ತಾವು ಅದನ್ನು ತಾವು ನೋಡಿ. ಖಾತಾ ವಿಷಯ ಬಂದಾಗ ಕಾರ್ಪೋರೇಷನ್ ಅಥಾರಿಟಿಸ್‌ನಲ್ಲಿ ಖಾತಾ ಎಂಟರ್ ಆಗುವಾಗ ವಿತ್‌ಇನ್ ತ್ರೀ ಇಯರ್ಸ್ ಬೇಕಾಗುತ್ತದೆ. ಸೆಕ್ಷನ್ 178 (ಎ)ನಲ್ಲಿ ಬರೀ ಕ್ಲೇಮ್ಸ್ ಹಾಕಿದಾಗ ಮಾತ್ರ.

ಶ್ರೀ ಹೆಚ್.ಡಿ. ದೇವೇಗೌಡ : ನಮ್ಮ ಪ್ರಾಪರ್ಟಿಯನ್ನು ಯಾರು ನಾಕ್‌ಆಫ್ ಮಾಡಿರುತ್ತಾರೋ ಅದರಿಂದ ನಾವು ವಾಪಸ್ ತೆಗೆದುಕೊಳ್ಳುರಾಗ 178ನಲ್ಲಿ ಏನು ಅಳವಡಿಸಿದ್ದಾರೋ ಆ ಒಂದು ಸ್ಕ್ವಾನ್‌ಗಮ ಈ ಒಂದು ಕ್ಲಾಸನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ಇದರಲ್ಲಿ ಟೈಮ್ ಲಿಮಿಟ್ ಆಗಲೀ ಮತ್ತೊಂದಾಗಲೀ ಕೊಟ್ಟಿಲ್ಲ. "Provision relating to the land and other properties of the Corporation. It is under Section 178"

178 ನಲ್ಲಿ ಏನು ಬರೆದಿದ್ದೇವೆ? ಪ್ರಾಪರ್ಟಿಯನ್ನು ಪುನಃ ನಾವು.

ಶ್ರೀಮತಿ ಪ್ರಮಿಳಾ ನೇಸರ್ಗಿ : ಅವರ ಐಡಿಯಾಸ್ ಅನ್ನು ಇನ್ಕಾರ್ಪೋರೇಟ್ ಯಾವುದು ಹೇಳಬೇಕೆಂದು ಅವರ ಉದ್ದೇಸ ಇತ್ತೋ ಅದು ಇದರಲ್ಲಿ ಬಂದಿಲ್ಲ ಎಂದು ನಾನು ಹೇಳುಬೇಕಾಗುತ್ತದದೆ. ಅಗ್ರಿಕಲ್ಚರ್ ಲ್ಯಾಂಡ್ ಅಂದರೆ ರೆವಿನ್ಯೂ ಲ್ಯಾಂಡ್ ಆಗುತ್ತದೆ, ನಾನ್ ಅಗ್ರಿಕಲ್ಚರ್ ಲ್ಯಾಂಡ್ ಮತ್ತು ಸೈಟ್ಸ್ ಇವತ್ತು ಬೇಕಾದಷ್ಟು ಜನ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ, ಅದನ್ನು ಕಾರ್ಪೋಷನ್‌ನವರು ಕೂಡಾ ಚೇಂಜ್ ಮಾಡಿದ್ದಾರೆ. ಬೆಂಗಳೂರಿನಲ್ಲಿ ಅಂತೂ ಬಹಳ ಸೈಟ್ಸ್ ಇಂಡಿವಿಯುಲ್ಸ್ ಹೆಸರಿನಲ್ಲಿ ಆಗಿವೆ. ಏರ್‌ಪೋರ್ಟ್ ರೋಡ್‌ನಲ್ಲೇ ಪ್ರೈವೇಟ್ ಲ್ಯಾಂಡ್‌ನ್ನು ಕಾರ್ಪೋರೇಷನ್ ಹೆಸರಿಗೆ ಮಾಡಿಕೊಂಡಿದ್ದಾರೆ. ಕಾರ್ಪೋರೇಷನ್‌ಹೆಸರಿಗೇ ಬರೆದು ಕೊಂಡು ಬಿಟ್ಟಿದ್ದಾರೆ, ಅದೆಲ್ಲಾ ಇದರಲ್ಲಿ ಬರಬೇಕಾಗುತ್ತದೆ. ಸರಿಯಾಗಿ ಕಾಂಪ್ರಹೆನ್ಸೀವ್ ಆಗಿ ಇದರಲ್ಲಿ ತಂದಿಲ್ಲ.

ಶ್ರೀ ಕಾಗೋಡು ತಿಮಪ್ಪ : ಕಾರ್ಪೋರೇಷನ್ ವ್ಯಾಪ್ತಿಯಲ್ಲಿ ಅನೇಕ ಗ್ರಾಮಗಳೆಲ್ಲಾ ಸೇರಿವೆ. ಹಾಗೇದರೆ ಗ್ರಾಮಠಾಣಗಳ ಪ್ರಶ್ನೆ ಏನು?

ಶ್ರೀ ಹೆಚ್.ಡಿ. ದೇವೇಗೌಡ : ಅವು ನೋಟಿಫೈಡ್ ಏರಿಯಾಗೆ ಸೇರುವವರೆಗೂ ಆ ಪ್ರಶ್ನೆ ಬರುವುದಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಇದರಲ್ಲಿ ಕನ್‌ಫ್ಯೂಷನ್ ಏನೆಂದರೆ ಈಗ ನಾನು ಒಂದು ಕ್ರಯ ಪತ್ರ ಬರೆಸಿಕೊಳ್ಳುತ್ತೇನೆ, ರಿಜಿಸ್ಟರ್ ಆದ ಮೇಲೆ ಖಾತಾ ನಮ್ಮ ಹೆಸರಿಗೆ ಆಗಬೇಕಾದರೆ ಇಷ್ಟು ಪರ್‌ಸೆಂಟ್ ಎಂದು ಅದರ ಮೇಲೆ ಟ್ಯಾಕ್ಸ್ ಬೇರೆ ಹಾಕಿದ್ದೀರಿ. ಟ್ಯಾಕ್ಸ್ ಕಟ್ಟಿ ಅವರು ಖಾತವನ್ನು ಟ್ರಾನ್ಸಫರ್ ಮಾಡಿಸಿಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಬೇಕಾಗಿರುವುದರಿಂದ ಇದನ್ನು ಮುಂದಕ್ಕೆ ಹಾಕುವುದು ಒಳ್ಳೆಯದೆಂದು ನನ್ನ ಸಲಹೆ.

ಶ್ರೀ ಎಂ.ಸಿ. ನಾಣಯ್ಯ : ಇದರ ಬಗ್ಗೆ ಸದನದ ತೀರ್ಮಾನವಾದರೆ ಬೇಕಾದರೆ ಮುಂದೂಡುವ. ಆದರೆ, ಇದರಲ್ಲಿ, ಯಾರಿಗೆ ತೊಂದರೆಯಾಗಿದೇ ಮತ್ತು ಯಾರು ಯಾರು ಕಳ್ಳತನದಲ್ಲಿ ಜಮಿನುಗಳನ್ನು ಟ್ರಾನ್ಸ್‌ಫರ್ ಮಾಡಿಕೊಂಡಿದ್ದಾರೆ ಹಾಗೂ ಕಾರ್ಪೋರೇಷನ್ ಜಮಿನುಗಳು ಇನ್ನೊಬ್ಬರ ವಶದಲ್ಲಿ ಇದ್ದೇವೋ ಅವನ್ನು ಕೂಡಾ ನಾವು ವಾಪಸ್ ತೆಗೆದೆಕೊಳ್ಳಬೇಕು, ಇದಕ್ಕೆಲ್ಲಾ ಬಹಳ ತೊಂದರೆಯಾಗುವುದರಿಂದ ಈ ಬಿಲ್ ಅನ್ನು ಪಾಸ್ ಮಾಡಬೇಕಾಗುತ್ತದೆ. ಇಲ್ಲವಾದರೆ ಅಲ್ಲಿಯವರೆಗೂ ಕೆಲಸ ಮಾಡುವುದಕ್ಕಾಗುವುದಿಲ್ಲ, 3ವರ್ಷಗಳ ಒಳಗೆ ಅದು ಮಾಡಬೇಕೆಂದು ಇದೆ ಮತ್ತು 178 (ಎ) ಪ್ರಕಾರ ಕಾರ್ಪೋರೇಷನ್ ಪ್ರಾಪರ್ಟಿಯನ್ ಯಾರಾದರೂ ಕ್ಲೈವರಲ್ ಮಾಡತಕ್ಕಂಥ ಪರಿಸ್ಥಿತಿ ಬಂದಾಗ ಅಲ್ಲಿ ಡಿವಿಷನಲ್ ಕಮಿಷನಲ್ ನೋಟೀಸ್ ಕೊಟ್ಟು ಅದನ್ನು ತೀರ್ಮಾನ ಮಾಡಬೇಕು ಎನ್ನುವುದು ಒಂದು ಆಮೇಲೆ 114 ರಲ್ಲಿ ಎಂದು ಪಾರ್ಟಿಗೆ ಸಂಬಂಧಪಟ್ಟಿರತಕ್ಕಂಥಾದ್ದರಲ್ಲಿ ಕಳ್ಳತನದಲ್ಲಿ ಫ್ರಾಡುಲೆಂಟ್ ಆಗಿ ಟ್ರಾನ್ಸ್‌ಫರ್ ಆಗಿರತಕ್ಕಂಥ ಸಂದರ್ಭ ಬಂದಾಗ 3ವರ್ಷದೊಳಗೆ ತೀರ್ಮಾನ ಮಾಡದೇ ಇರತಕ್ಕಂಥಾದ್ದು ಇನ್ನೊಂದು.

ಶ್ರೀ ಕಾಗೋಡು ತಿಮ್ಮಪ್ಪ : ಸುವೋ ಮೋಟೋ ಹೇಗೆ ಬರುತ್ತದೆ?

ಶ್ರೀ ಎಂ. ಸಿ. ನಾಣಯ್ಯ : ಕಮಿಷನರ್ ಗಮನಕ್ಕೆ ಬಂದಾಗ, ಹಾಗೆ ಮಾಡಬಾರದು ಎಂದು ಮಾಡಿದರೆ ಏನೂ ತಪ್ಪಿಲ್ಲವಲ್ಲಾ.

ಶ್ರೀ ಹೆಚ್.ಎನ್. ನಂಜೇಗೌಡ : ಅಣ್ಣ ತಮ್ಮಂದಿರು ಸುಳ್ಳು ಬರೆಸಿಕೊಳ್ಳುತ್ತಾರೆ ಎಂಬುದ ನೋಡುವುದಕ್ಕಾ ಇರುವುದು ಕಮಿಷನರ್?

ಶ್ರೀ ಎಂ.ಸಿ. ನಾಣಯ್ಯ: ಏಕೆ ಮಾಡಲಿಕ್ಕಾಗುವುದಿಲ್ಲ? ಸುವೋ ಮೋಟೋ ಆಗಿ ಯಾವುದು ಬೇಕಾದರೂ ನೋಡಬಹುದು.

ಶ್ರೀ ವೈಜನಾಥ್ ಪಾಟೀಲ್: ಕಾರ್ಪೋರೇಷನ್ ಮತ್ತು ಪ್ರೈವೇಟ್ ಪ್ರಾಪರ್ಟಿಗಳಲ್ಲಿ ಡಿಸ್ಪ್ಯೂಟ್ ಬಂದರೆ ಏನು ಮಾಡಬಹುದೆಂದು 178 ಎ ನಲ್ಲಿ ಕ್ಲಿಯರ್ ಆಗಿದೆ ಇದರಲ್ಲಿ ಯಾವುದೇ ಸಂಶಯ ಬರಲಿಕ್ಕೆ ಕಾರಣವಿಲ್ಲ, ಒಂದು ಪಕ್ಷ ಇದರಲ್ಲಿ ಏನಾದರೂ ಸಂಶಯ ಬಂದರೇ ಅವರ ಬಗ್ಗೆ ಅಮೆಂಟ್‌ಮೆಂಟ್ ತರಬಹುದು. ಕಾರ್ಪೋರೇಷನ್ ಮತ್ತು ಪ್ರೈವೇಟ್ ಪ್ರಾಪರ್ಟಿ ಬಗ್ಗೆ ಡಿಸ್ಪ್ಯೂಟ್ ಬಂದರೆ ಡಿಸ್ಪೆತ ಮಾಡುವಂಥ ಅಥಾರಿಟಿ ಮೊದಲು ಯಾವುದೂ ಇರಲಿಲ್ಲ, ಆ ದೃಷ್ಟಿಯಿಂದ ಇದನ್ ರೆವಿನ್ಯೂ ಕಮಿಷನರ್‌ಗೆ ಅಧಿಕಾರ ಕೊಟ್ಟಿದ್ದಾರೆ. ಮೊದಲು ಇದರ ಬಗ್ಗೆ ಸಿವಿಲ್ ಕೋರ್ಟ್ ಮತ್ತು ಹೈ ಕೋರ್ಟಿಗೆ ಹೋಗಬೇಕಾಗಿತ್ತು. ಇವತ್ತು ಬಗ್ಗೆ ಎಷ್ಟೋ ಕೇಸ್‌ಗಳು ಪೆಂಡಿಂಗ್ ಇವೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ : ಅನೇಕ ಜನ ಮಿತ್ರರು 114 (ಎ) ಕಾಯಿದೆ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲ ಪುರಸಭೆ ಕಾಯಿದೆ ಮತ್ತು ನಗರ ಪಾಲಿಕೆ ಕಾಯಿದೆ ಎಂದು ಎರಡು ಕಾಯಿದೆಗಳು ಇದೆ. ಪುರಸಭಾ ಕಾಯಿದೆಯಲ್ಲಿ ಏನಿದೆ ಎಂದರೆ. ಒಂದು ಪಕ್ಷ ಒಂದು ಖಾತೆಯನ್ನು ಒಬ್ಬನ ಹೆಸರಿನಿಂದ ಇನ್ನೊಬ್ಬನ ಹೆಸರಿಗೆ ತಪ್ಪು ಮಾಹಿಗಳನ್ನು ಕೊಟ್ಟು ಒಂದು ಸಾರಿ ಬದಲಾವಣೆ ಮಾಡಿದಾಗ ಅಫೀಲ್ ಮಾಡತಕ್ಕಂಥಾದ್ದಕ್ಕೆ ಒಂದು ಸೆಕ್ಷನ್ ಅನ್ನು ವಿಧಿಸಿ ಜಿಲ್ಲಾಧಿಕಾರಿಧಿಗೆ ಅದೇಶವನ್ನು ಕೊಟ್ಟಿದ್ದಾರೆ. ಇದು ಪುರಸಭೆಯಲ್ಲಿ ಅಳವಡಿಸಿರುವಂಥ ಕಾಯಿದೆ. ಈ ಕಾರ್ಪೋರೇಷನ್ ಕಾಯಿದೆಯಲ್ಲಿ ಏನಾಗಿತ್ತು ಎಂದರೆ, 114ನೇ ಸೆಕ್ಷನ್‌ನಲ್ಲಿ ಅಫಲೇಟ್ ಅಥಾರಿಟಿ ಯಾರು ಎಂದು ತೋರಿಸುವಂಥ ಕಾಯಿದೆ ಈಗಿರುವಂಥಾದ್ದರಲ್ಲಿ ಇಲ್ಲ. ಅದುದರಿಂದ ಈ 114 ಎ ಇನ್‌ಸರ್ಟ್ ಮಾಡುತ್ತಿದ್ದಾರೆ. ಇದರಲ್ಲಿ 3 ವರ್ಷ ಕಾಲದ ಒಳಗೆ ಎನ್ನುವ ಪದ ಏನಿದೆ ಅದನ್ ತೆಗೆದರೆ ಬಹುಶಃ 12 ವರ್ಷ ಏನು ಜಮಿನಿನ ವಾದ ವಿವಾದ ಅಥವಾ ಕಾನೂನು ಒಳಪಡುವುದಿಲ್ಲ ಎಂದು ಏನು ವಾದ ಮಾಡುತ್ತಿದ್ದಾರೆ. ಒಂದು ಪಕ್ಷ ತಿಳುವಳಿಕೆ ದ್ದದಂಥ ವ್ಯಕ್ತಿಗಳಾಗಲೀ ಅಥವಾ ಮೈನರ್ ಎಂದು ಏನು ಹೇಳುತ್ತೇವೆ ಅವರಿಗೆ 12 ವರ್ಷ, ಆದ ನಂತರವೂ ಸಹಾ ಅಫೀಲ್ ಹಾಕುವಂಥ ನ್ಯಾಯಾಲಯಗಳಲ್ಲಿ ಆದೇಶವಿರುವುದರಿಂದ ಇದರಲ್ಲಿ 3 ವರ್ಷಗಳ ಕಾಲ ಎಂದು ಏನು ನಿಗದಿಪಡಿಸಿದ್ದಾರೆ. ಅದನ್ನು ಸರಿಪಡಿಸಿದರೆ ಸರಿಯಾಗುತ್ತದೆ ಎಂಬುದು ಸರ್ಕಾರಕ್ಕೆ ನನ್ನ ಒಂದು ಸಲಹೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೇ, ಈಗ ಮುನಿಸಿಪಲ್ ಕಾರ್ಪೋರೇಷನ್ ಆಕ್ಟ್‌ನಲ್ಲಿ ಎನಾದರೂ ಖಾತಾ ಬದಲಾವಣೆ ಬಗ್ಗೆ ತಪ್ಪಾಗಿದ್ದರೆ ಅದನ್ನು ಸರಿಮಾಡಿಸಿ ಕೊಳ್ಳುವುದಕ್ಕೆ if it is between the two parties, that can get it rectified either by approaching the civil court or by using this provision for rectification.

ಇಲ್ಲ ಏನಾಗುತ್ತದೆ? 114 ಎ ಮಾಡಿರುವುದರಿಂದ it gives an impression that it indirectly conferring right of appeal tothe Commissioner.

ಇವರಿಗೆ ಅಫೀಲ್ ಪ್ರಾವಿಷನ್ ಕ್ರಿಯೇಟ್ ಮಾಡಿದ ಹಾಗೆ ಮಡಿದ್ದೀರಿ. By way of amendment ಅಫೀಲ್ ಪ್ರಾವಿಷನ್ ಕ್ರಿಯೇಟ್ ಮಾಡಿ ಅವರಿಗೆ ಅದು ಬಿಟ್ಟು 114 ಎ.

comple to reading of the provision goes to show that is conferring appeal right to the Commissioner.

ಅಧ್ಯಕ್ಷರು : ಅಪಲೇಟ್ ಅಥಾರಿಟಿ ಇರಬಾರದೇ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ : 3ವರ್ಷಗಳೊಳಗೆ ಗಮನಕ್ಕೆ ಬಂದರೆ ರೆಕ್ಟಿಫೈ ಮಾಡಬೇಕೆಂದು ಇದೆ. 3ವರ್ಷ 51 ದಿವಸದ ಮೇಲೆ ಬಂದರೆ?

There by it given an impresion that if even if there is any wrong entry, that will be decided as the proper entry.ಮೂರು ವರ್ಷಗಳ ಒಳಗೆ ನೀವೇನಾದರೂ ಕಮಿಷನರ್‌ರ ಗಮನಕ್ಕೆ ಹೋದರೆ. ಮೂರು ವರ್ಷ ಒಂದು ದಿವಸ ಆದ ಮೇಲೆ, ಕಮಿಷನರ್ ಗಮನಕ್ಕೆ ಬಂದರೆ he cannot pass any order under this provision Automatically it will be came law The wrong entry will he edeclared as the proper entry ಆದ್ದರಿಂದ ಇದನ್ನು ಅಫೀಲ್ ಪ್ರಾವಿಷನ್ ಎಂದು ಮಾಡಿ ಏನಾದರೂ

ತಪ್ಪಿದ್ದರೆ. ಅದನ್ನು ಕಮಷನರ್‌ರ ಗಮನಕ್ಕೆ ತಂದರೆ, Commissioner by way of appeal he can decide it ಎಂದು ಮಾಡಿದರೆ ಸರಿ ಎಂದು ಕಾಣುತ್ತದೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಸಭಾಧ್ಯಕ್ಷರೇ, ನಾನು ಕೂಡ ವಕೀಲನಾಗಿ ನನ್ನ ಅಭಿಪ್ರಾಯಗಳನ್ನು ಈ ಕುರಿತಾಗಿ ತಿಳಿಸುವುದೇನೆಂದರೆ, ಈ ವಿಚಾರದಲ್ಲಿ ಸರಕಾರದವರು ತಂದಂಥ ಕಾನೂನು ಸರಿ ಇದೆ ಎಂಬ ಮಾತನ್ನು ಹೇಳ ಬಯಸುತ್ತೇನೆ. ಈ ಒಂದು ಕಾನೂನು ಪ್ರಕಾರ ಇವೋತ್ತು ಕಾರ್ಪೋರೇಷನ್‌ನ ಕಾನೂನಿನಲ್ಲಿ ಎಕ್ಸಿಸ್ಟಿಂಗ್ ಲಾ ದಲ್ಲಿ ಆಸ್ತಿಗಳ ಬಗ್ಗೆ ತಂಟೆ ವ್ಯಾಜ್ಯಗಳು ಬಂದಾಗ ಅಫೀಲು ಮಾಡತಕ್ಕಂತ ಒಂದು ಪ್ರಾವಿಷನ್ ಅಥವಾ ತಾವೇ ರೀ-ಓಪನ್ ಮಾಡಲು ಸುವೋಮೋಟೋವಾಗಿ ಒಂದು ಅಧಿಕಾರ ಇಲ್ಲದೇ ಇರುವುದರ ಸಲುವಾಗಿ ಇಂಥಹ ಒಂದು ಕಾನೂನನ್ನು ಒಳಪಡಿಸಿದ್ದು ಜನಸಾಮಾನ್ಯರಿಗೆ ಅನುಕೂಲವಾಗುವಂಥ ಕಾನೂನು ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ಇಚ್ಚೆ ಪಡಿತ್ತೇನೆ. ಇಲ್ಲಿ ಮೂರು ವರ್ಷಗಳೆಂದು ವ್ಯಕ್ತಪಡಿಸಿದ್ದೂ ಕೂಡ ಯೋಗ್ಯವಾಗಿದೆ. ಯಾಕೆಂದರೆ, ಇವೋತ್ತು ಅನೇಕ ವರ್ಷಗಳ ನಂತರ ಕಮಿಷನರ್‌ಹಾರವರಿಗೆ ರೀ-ಓಪನ್ ಮಾಡತಕ್ಕಂಥ ಅಧಿಕಾರವನ್ನು ಕೊಡಬಾರದು. ಕೇವಲ ಮೂರು ವರ್ಷಗಳೆಂದು ನಿಗದಿಪಡಿಸಿರುವುದು ಕೂಡ ಸ್ವಾಗತಾರ್ಹ. ಹಾಗೆಯೇ ಲಾ ಆಫ್ ಲಿಮಿಟೇಷನ್ ಪ್ರಕಾರ ಅಡ್‌ವರ್ಸ್ ಪೋಸಿಷನ್ 12 ವರ್ಷ ಇದೆ. ಅಥವಾ ಸರಕಾರದ ಆಸ್ತಿ ಇದ್ದಲ್ಲಿ 30 ಮತ್ತು 60 ವರ್ಷಗಳು ಎಂದು ಇದೆ. ಒಟ್ಟಾರೆ ಯಾವುದೇ ಜನಸಾಮಾನ್ಯರಿಗೆ ಸಿವಿಲ್ ಕೋರ್ಟಿಗೆ ಹೋಗತಕ್ಕಂಥ ಹಕ್ಕನ್ನು ಯಾರಿಗೂ ಕೂಡ ಕಸಿದುಕೊಳ್ಳಲು ಆಗುವುದಿಲ್ಲ,, ಆದರೆ ಕಮಿಷನರ್‌ರಿಗೆ ವಿಶೇಷ ಅಧಿಕಾರವನ್ನು ನೀಡಿ ಈ ಕಾನೂನನ್ನು ತಂದಿರುವುದು ಉತ್ತಮವಾಗಿದೆ. ಇದರ ಹಿನ್ನಲೆಯಲ್ಲಿ ಬೇರೆ ಯಾವ ಉದ್ದೇಶವೂ ಇರಲಾರದು ಎಂಬ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸುತ್ತೇನೆ.

Sri Quamural Islam (Gulbarga): Sir, I also welcoome this amendment Bill. It is a very practtical things approach .

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಕಮರಲ್‌ರವರು ಏನು ಹೇಳುವರು ಅಂದರೆ ಮಸೂದೆ ಹೇಗಾದರೂ ಇರಲಿ ಸಚಿವರು ನಮ್ಮ ಜಿಲ್ಲೆಯುವರು ಆದ್ದರಿಂದ ಬಿಟ್ಟುಬಿಡಿ ಎಂದು.

Sri. Quamural Islam; across with so many suchh cases. It is there fore a very practical approach to the problem.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ಕರ್ನಾಟಕ ಪೌರನಿಗಮ (ತಿದ್ದುಪಡಿ) ವಿಧೇಯಕ-1995ವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರ ವರೆಗೆ

ಅಧ್ಯಕ್ಷರು : "ಖಂಡ 2 ರಿಂದ 3ರರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಖಂಡಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ 1 ಇತ್ಯಾದಿ

ಅಧ್ಯಕ್ಷರು ; ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂಕ್ತ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ವೈಜನಾಥ್ ಪಾಟೀಲ್(ನಗರಾಭೀವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೇ, "ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) 1995ರ ವಿಧೇಯಕವನ್ನು ಅಂಗೀಕರಿಸ ಬೇಕೆಂದು ಕೋರುತ್ತೇನೆ,"

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,ಕರ್ನಾಟಕ ಪೌರನಿಗಮ (ತಿದ್ದುಪಡಿ) ವಿಧೇಯಕ 1995ನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ವಿಷಯ : ಪುರ ಸಭೆಗಳು ಹಾಗೂ ಮಹಾನಗರ ಪಾಲಿಕೆಗಳ ಅವಧಿಯನ್ನು ಮುಂದುವರಿಸುವ ಬಗ್ಗೆ :

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ತಾವು ಇತರ ಪ್ರಕಟಣೆಗಳನ್ನು ಹೊರಡಿಸುವ ಮುಂದೆ ತಮ್ಮ ಅಪ್ಪಣೆ ತೋರಿ. ಮಾನ್ಯ ಮುಖ್ಯಮಂತ್ರಿಗಳ ಮತ್ತು ಸಂಬಂಧಪಟ್ಟ ಸಚಿವರ ಗಮನಕ್ಕೆ ತರಬೇಕೆಂದು ಇದ್ದೇನೆ. ಈ ಸದನದಲ್ಲಿ ಹಿಂದೆ ಮಾನ್ಯ ನಗರಾಭಿವೃದ್ಧಿ ಸಚಿವರು, ಯಾವ ಪುರಸಭೆಗಳು, ಮಹಾನಗರ ಪಾಲಿಕೆಗಳ ಅವಧಿಯು ಮುಗಿದ ನಂತರ ಮುಂದುವರುಸುವುದಿಲ್ಲ ಎಂಬ ಸ್ಪಷ್ಟವಾದ ಭರವಸೆಯನ್ನು ಈ ಸಭೆಯಲ್ಲಿ ಕೊಟ್ಟಿದ್ದಾರೆ. ಇವೋತ್ತು ಡೆಕ್ಕನ್‌ಹೆರಾಲ್ಡ್ ಪತ್ರಿಕೆಯ ಒಂದು ವರದಿಯ ಪ್ರಕಾರ ಮುಂದುವರಿಸ ಬಹುದು ಅನ್ನುವ ಸೂಚನೆ ಇದೆ. ಆದ್ದರಿಂದ ತಮ್ಮ ಮೂಲಕ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸರಕಾರ ಯಾವುದೇ ಅಂತಿಮ ನಿರ್ಣಯವನ್ನು ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರಕಾರ ಚರ್ಚೆ ಮಾಡಿ ನಿರ್ಣಯ ಮಾಡಬೇಕಾಗಿದೆ. ಕಾರಣ ಏನೆಂದರೆ, ಲೆಜಿಸ್ಲೇಟಿವ್ ಕೌನ್ಸಿಲ್‌ಗ್ ಲೋಕಲ್‌ಬಾಡೀಸ್‌ನಿಂದ ಚುನಾವಣೆಯಾಗ ಬೇಕಾಗಿರುವುದರಿಂದ ಆ ಒಂದು ಕಾನ್‌ಸ್ಟಿಟ್ಯೂಯನ್ಸಿಯನ್ನು ನಾವು ಉಳಿಸಿಕೊಳ್ಳ ತಕ್ಕಂಥಾದ್ದರ ಬಗ್ಗೆ 70 ಪರ್‌ಸೆಂಟ್ ಆಫ್ ದಿ ಟೋಟಲ್ ಏನಿರ್ ಬೇಕು, ಎಂಬ ಬಗ್ಗೆ ಏನು ತೊಂದರೆ ಇದೆ ಅದರ ಬಗ್ಗೆ ನಾವು ಇವೊತ್ತು ಎಲೆಕ್ಷನ್ ಕಮಿಷನ್‌ಗೆ ಬರೆದಿದ್ದೇವೆ. ಅವರ ಅಭಿಪ್ರಾಯವನ್ನು ತೆಗೆದುಕೊಂಡು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ, ಆದ್ದರಿಂದ ನಾವು ಯಾವುದೇ ಫೈನಲ್ ಡಿಸಿಷನ್‌ನ್ನು ಆ ಕುರಿತು ತೆಗುದು ಕೊಂಡಿಲ್ಲ.

ಅಧ್ಯಕ್ಷರು : ರೆಡ್ಡಿಯವರೇ ನೀವು ನಿಮ್ಮ ರೆಸಲ್ಯೂಷನ್ ವಿಸ್ತಾರವನ್ನು ಹೇಳುತ್ತಾ ಇದ್ದೀರಿ. ನಾನು ಆ ಬಗ್ಗೆ ಗೃಹಸಚಿವರ ಹತ್ತಿರ ಮಾತನಾಡಿದ್ದೇನೆ. ಸರಕಾರ ಜೊತೆಗೆ ಚರ್ಚೆ ಮಾಡಿದ್ದೇನೆ. ಈಗ ಮುಂಬೈ ನಗರದಲ್ಲಿ ಶಾಂತ ಪರಿಸ್ಥಿತಿ ಇರುವುದರಿಂದ ನಾವು ಆತಂಕ ಪಡುವ ಕಾರಣ ಇಲ್ಲದೇ ಇರುವುದರಿಂದ, ಆ ಚರ್ಚೆಗೆ ನಾವು ಇಲ್ಲಿ ಅವಕಾಶ ಮಾಡಿಕೊಟ್ಟು ಚರ್ಚೆಯ ಸಂದರ್ಭದಲ್ಲಿ ಏನಾದರೂ ಅನಪೇಕ್ಷಣೀಯ ಮಾತುಗಳು ಹೊರಹೊಮ್ಮಿ ಅದರ ಕಾರಣದಿಂದ ಅಲ್ಲಿ ಮತ್ತೆ ಗದ್ದಲವಾಗಲು

ಕಾಣವಾದರೆ ನಮ್ಮ ಸಹೋದರರಿಗೆ ನಾವಾಗಿಯೇ ತೊಂದರೆ ಮಾಡಿದಂತಾಗುತ್ತದೆ. ರಾಜ್ಯದ ಹಿತದೃಷ್ಟಿಯಿಂದ ಅಲ್ಲಿ ನಮ್ಮ ಸಹೋದರರು ಅಲ್ಲ ಯಾರಿದ್ದಾರೆ, ಅವರ ಹಿತದೃಷ್ಟಿಯಿಂದ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ ಎಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲಿನ ಕಾನೂನು ಮತ್ತು ಸುವ್ಯವಸ್ಥೆಯ ವಿಚಾರವಾಗಿ....

ಅಧ್ಯಕ್ಷರು : ತಾವು ಎಲ್ಲರ ಪರವಾಗಿ ಹೇಳಲು ಬರುವುದಿಲ್ಲ, ಯಾರ್ಯಾರು ಹೇಗೆ ಮಾತನಾಡುತ್ತಾರೆ ಎಂಬುದನ್ನು ನನಗೆ ಹೇಳಿ ಮಾತನಾಡುತ್ತಾರೋ? ಆದ್ದರಿಂದ ಆ ಚರ್ಚೆ ಈಗ ಬೇಡ.

Reg: State Govt's stand on TADA.

Srio Quamural Islam : A News has appeared in aurdu paper on a front page that the Govt of Karnataka is recommending to the central Govt. to Continue TADA.

Mr. Sreaker : The Home Minister has told me that it is a false niws and the state Govt has no such proposal.

ಪ್ರಕಟಣೆಗಳು

Sri Quamural Islam : It has appeared in the news paper and there fore, I wanted to know the correct position.

Mr. Speaker : They will take the necessary steps to clarify .

ಅಧ್ಯಕ್ಷರು ; ಮಾನ್ಯ ಸಭಾಪತಿಯವರಿಂದ ಈ ಕೆಳಗಿನ ಸಂದೇಶಗಳು ಬಂದಿರುತ್ತವೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ, ಹಾಗೂ ನಡೆವಳಿಕೆ ನಿಯಮ 114ರ ಮೇರೆಗೆ 19-4-1995 ರಂದು 1995 ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಅಯೋಗ ವಿಧೇಯಕವನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1995-96ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮಾನವಾಗಿ ನಾಮಪತ್ರಗಳು ಬಂದಿರುವುದರಿಂದ ವಿಧಾನ ಸಭೆಯಿಂದ ವಿವಿಧ ಸಮಿತಿಗಳಿಗೆ ಈ ಕೆಳಗೆ ಸೂಚಿಸಿರುವ ಸದಸ್ಯರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸುತ್ತೇನೆ.

ಸಭಾಧ್ಯಕ್ಷರ ಪ್ರಕಟಣೆಗಳು

1. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

ಶ್ರೀಯುತರುಗಳಾದ:

1. ಸಿ.ಎಸ್. ಪುಟ್ಟೇಗೌಡ
2. ಎಸ್.ಕೃಷ್ಣಪ್ಪ
3. ಕೆ.ಎನ್. ನಾಗೇಗೌಡ
4. ಮಾಮನಿ ಚಂದ್ರಶೇಖರ ಮಲ್ಲಿಕಾರ್ಜುನ